ಪಂಚಾಚಾರ ಪರಾಶಕ್ತಿಃ ಪಾರ್ವತಿ ಪರಿಚಾರಿಕಾ

ಬಲಪ್ರದಾಯಿನಿ ಕಾಂತಾ ಭಸ್ಮರೇಖಾವಿಭೂಷಿತಾ

ಇಂದು ಮಂಡಲ ಸಂಪೂಜ್ಯ ಇನಗರ್ವಾಹಾರಿಣೀ

ಈಶ್ವರೀ ಪರಮಾಶೈವೀ ಈಡಿತಾತ್ಮ ಸ್ವರೂಪಿಣೀ

ಕ್ಷಮಾ ಕಾಂತಿರ್ಧೃತಿರ್ಮೇಧಾ ಕ್ಷರಾಕ್ಷರ ವಿಹಾರಿಣೀ

ಕ್ಷತ ತ್ರಾಣ ಪರಾ ಭದ್ರಕಾಳೀ ದುರ್ಗಾ ಯಶಸ್ವಿನೀ

ಸ್ಕಂದ ಪುರಾಣ. </string>

ಶ್ರೀಭದ್ರಕಾಳೀ ಕವಚಂ

ಓಂ ಶ್ರೀದೇವ್ಯುವಾಚ ।

ಓಂ ಭಗವನ್ಕರುಣಾಂಭೋಧೇ ಶಾಸ್ತ್ರಾಂಭೋ ನಿಧಿಪಾರಗಃ ।

ತ್ರೈಲೋಕ್ಯಸಾರಯೇತ್ತತ್ತ್ವಂ ಜಗದ್ರಕ್ಷಣಕಾರಕಃ ॥ ೧ ॥

ಭದ್ರಕಾಲ್ಯಾ ಮಹಾದೇವ್ಯಾಃ ಕವಚಂ ಮಂತ್ರಗರ್ಭಕಂ ।

ಜಗನ್ಮಂಗಲದಂ ನಾಮ ವದ ಶಂಭೋ ದಯಾನಿಧೇ ॥ ೨ ॥

ಶ್ರೀಭೈರವಃ ಉವಾಚ ।

ಭೈಂಭದ್ರಕಾಲೀ ಕವಚಂ ಜಗತ್ಮಂಗಲನಾಮಕಂ ।

ಗುಹ್ಯಂ ಸನಾತನಂ ಪುಣ್ಯಂ ಗೋಪನೀಯಂ ವಿಶೇಷತಃ ॥ ೩ ॥

ಜಗತ್ಮಂಗಲನಾಮ್ನೋಽಸ್ಯ ಕವಚಸ್ಯ ಋಷಿಃ ಶಿವಃ ।

ಉಷ್ಣಿಕ್ಛಂದಃ ಸಮಾಖ್ಯಾತಂ ದೇವತಾ ಭದ್ರಕಾಲಿಕಾ ॥ ೪ ॥

ಭೈಂ ಬೀಜಂ ಹೂಂ ಶಕ್ತಿಃ ತಥಾ ಸ್ವಾಹಾ ಕೀಲಕಮುಚ್ಯತೇ ।

ಧರ್ಮಾರ್ಥ ಕಾಮ ಮೋಕ್ಷಾರ್ಥೇ ವಿನಿಯೋಗಃ ಪ್ರಕೀರ್ತಿತಃ ॥ ೫ ॥

ಅಸ್ಯ ಶ್ರೀ ಜಗತ್ಮಂಗಲ ನಾಮ್ನೋ ಭದ್ರಕಾಲೀ ಕವಚಸ್ಯ ಶಿವಋಷಿಃ,

ಉಷ್ಣಿಕ್ ಛಂದಃ, ಶ್ರೀಭದ್ರಕಾಲೀ ದೇವತಾ, ಭ್ಯೆಂ ಬೀಜಂ, ಹೂಂ ಶಕ್ತಿಃ,

ಸ್ವಾಹಾ ಕೀಲಕಂ, ಧರ್ಮಾರ್ಥಕಾಮಮೋಕ್ಷಾರ್ಥೇ ಕವಚ ಪಾಠೇ ವಿನಿಯೋಗಃ .

ಅಥ ಧ್ಯಾನಂ .

ಉದ್ಯಶ್ಚಂದ್ರಕಲಾವತಂಸಿತ ಶಿಖಾಂ ಕ್ರೀಂಕಾರ ವರ್ಣೋಜ್ವಲಾಂ ।

ಶ್ಯಾಮಾಂ ಶ್ಯಾಮಮುಖೀಂ ರವೀಂದು ನಯನಾಂ ಹೂಂ ವರ್ಣ ರಕ್ತಾಧರಾಂ ॥ ೬ ॥

ಭ್ಯೆಂ ಬೀಜಾಂಕಿತ ಮಾನಸಾಂ ಶವಗತಾಂ ನೀಲಾಂಬರೋದ್ಭಾಸಿತಾಂ ।

ಸ್ವಾಹಾಲಂಕೃತ ಸರ್ವ ಗಾತ್ರ ಲತಿಕಾಂ ಭ್ಯೆಂ ಭದ್ರಕಾಲೀಂ ಭಜೇ ॥ ೭ ॥

ಓಂ ಭ್ಯೆಂ ಪಾತು ಮೇ ಶಿರೋ ನಿತ್ಯಂ ದೇವೀ ಭದ್ರಕಾಲಿಕಾ ।

ಲಲಾಟಂ ಕ್ರೀಂ ಸದಾ ಪಾತು ಮಹಾರತ್ನೇಶ್ವರೀ ತಥಾ ॥ ೮ ॥

ಕ್ರೀಂ ಭ್ರುವೌ ಪಾತು ಮೇ ನಿತ್ಯಂ ಮಹಾಕಾಮೇಶ್ವರೀ ತಥಾ ।

ನೇತ್ರೇವ್ಯಾತ್ ಕ್ರೀಂ ಚ ಮೇ ನಿತ್ಯಂ ನಿತ್ಯಾನಂದಮಯೀ ಶಿವಾ ॥ ೯ ॥

ಗಂಡೌ ಮೇ ಪಾತು ಭ್ಯೆಂ ನಿತ್ಯಂ ಸರ್ವಲೋಕಮಹೇಶ್ವರೀ ।

ಶ್ರುತೀ ಹ್ರೀಂ ಪಾತು ಮೇ ನಿತ್ಯಂ ಸರ್ವಮಂಗಲಮಂಗಲಾ ॥ ೧೦ ॥

ನಾಸಾಂ ಹ್ರೀಂ ಪಾತು ಮೇ ನಿತ್ಯಂ ಮಹಾತ್ರಿಭುವನೇಶ್ವರೀ ।

ಅಧರೇ ಹೂಂ ಸದಾವ್ಯಾನ್ಮೇ ಸರ್ವಮಂತ್ರಮಯೀ ತಥಾ ॥ ೧೧ ॥

ಜಿಹ್ವಾಂ ಕ್ರೀಂ ಮೇ ಸದಾ ಪಾತು ವಿಶುದ್ಧೇಶ್ವರರೂಪಿಣೀ ।

ಭ್ರೈಂ ಹ್ರೀಂ ಹ್ರೀಂ ಮೇ ರದಾನ್ಪಾತು ನಿತ್ಯಾ ಕ್ರೀಂ ಕುಲಸುಂದರೀ ॥ ೧೨ ॥

ಹ್ರೀಂ ಹೂಂ ಕ್ರೀಂ ಮೇ ಗಲಂ ಪಾತು ಜ್ವಾಲಾಮಂಡಲಮಂಡನಾ ।

ಹ್ರೀಂ ಹೂಂ ಕ್ರೀಂ ಮೇ ಭುಜೌ ಪಾತು ಭವಮೋಕ್ಷಪ್ರದಾಂಬಿಕಾ ॥ ೧೩ ॥

ಹ್ರೀಂ ಹೂಂ ಕ್ರೀಂ ಮೇ ಕರೌ ಪಾತು ಸರ್ವಾನಂದಮಯೀ ತಥಾ ।

ಸ್ತನೌ ಕ್ರೀಂ ಹೂಂ ಸದಾ ಪಾತು ನಿತ್ಯಾ ನೀಲಪತಾಕಿನೀ ॥ ೧೪ ॥

ಕ್ರೀಂ ಭ್ರೈಂ ಹ್ರೀಂ ಮಮ ವಕ್ಷೋವ್ಯಾತ್ ಬ್ರಹ್ಮವಿದ್ಯಾಮಯೀ ಶಿವಾ ।

ಭ್ರೈಂ ಹೂಂ ಕುಕ್ಷಿಂ ಮೇ ಸದಾ ಪಾತು ಮಹಾತ್ರಿಪುರಸುಂದರೀ ॥ ೧೫ ॥

ಐಂ ಸೌಃ ಭ್ರೈಂ ಪಾತು ಮೇ ಪಾರ್ಶ್ವೌ ವಿದ್ಯಾ ಚತುರ್ದಶಾತ್ಮಿಕಾ ।

ಐಂ ಕ್ಲೀಂ ಭ್ರೈಂ ಪಾತು ಮೇ ಪೃಷ್ಠಂ ಸರ್ವಮಂತ್ರವಿಭೂಷಿತಾ ॥ ೧೬ ॥

ಓಂ ಕ್ರೀಂ ಐಂ ಸೌಃ ಸದಾವ್ಯಾನ್ಮೇ ನಾಭಿಂ ಭ್ರೈಂ ಬೈಂದವೇಶ್ವರೀ ।

ಓಂ ಹ್ರೀಂ ಹೂಂ ಪಾತು ಶಿಶ್ನಂ ಮೇ ದೇವತಾ ಭಗಮಾಲಿನೀ ॥ ೧೭ ॥

ಹ್ರೀಂ ಹ್ರೀಂ ಹ್ರೀಂ ಮೇ ಕಟಿಂ ಪಾತು ದೇವತಾ ಭಗರೂಪಿಣೀ ।

ಹೂಂ ಹೂಂ ಭ್ರೈಂ ಭ್ರೈಂ ಸದಾವ್ಯಾನ್ಮೇ ದೇವೀ ಬ್ರಹ್ಮಸ್ವರೂಪಿಣೀ ॥ ೧೮ ॥

ಓಂ ಕ್ರೀಂ ಹೂಂ ಪಾತು ಮೇ ಜಾನೂ ಮಹಾತ್ರಿಪುರಭೈರವೀ ।

ಓಂ ಕ್ರೀಂ ಐಂ ಸೌಃ ಪಾತು ಮೇ ಜಂಘೇ ಬಾಲಾಶ್ರೀತ್ರಿಪುರೇಶ್ವರೀ ॥ ೧೯ ॥

ಗುಲ್ಫೌ ಮೇ ಕ್ರೀಂ ಸದಾ ಪಾತು ಶಿವಶಕ್ತಿಸ್ವರೂಪಿಣೀ ।

ಕ್ರೀಂ ಐಂ ಸೌಃ ಪಾತು ಮೇ ಪಾದೌ ಪಾಯಾದ್ ಶ್ರೀಕುಲಸುಂದರೀ ॥ ೨೦ ॥

ಭೈಂ ಕ್ರೀಂ ಹೂಂ ಶ್ರೀಂ ಸದಾ ಪಾತು ಪಾದಾಧಃ ಕುಲಶೇಖರಾ ।

ಓಂ ಕ್ರೀಂ ಹೂಂ ಶ್ರೀಂ ಸದಾವ್ಯಾನ್ಮೇ ಪಾದಪೃಷ್ಠಂ ಮಹೇಶ್ವರೀ ॥ ೨೧ ॥

ಕ್ರೀಂ ಹೂಂ ಶ್ರೀಂ ಭೈಂ ವಪು ಪಾಯಾತ್ ಸರ್ವಂ ಮೇ ಭದ್ರಕಾಲಿಕಾ ।

ಕ್ರೀಂ ಹ್ರೀಂ ಹ್ರೀಂ ಪಾತು ಮಾಂ ಪ್ರಾತರ್ದೇವೇಂದ್ರೀ ವಜ್ರಯೋಗಿನೀ ॥ ೨೨ ॥

ಹೂಂ ಭೈಂ ಮಾಂ ಪಾತು ಮಧ್ಯಾನ್ಹೇ ನಿತ್ಯಮೇಕಾದಶಾಕ್ಷರೀ ।

ಓಂ ಐಂ ಸೌಃ ಪಾತು ಮಾಂ ಸಾಯಂದೇವತಾ ಪರಮೇಶ್ವರೀ ॥ ೨೩ ॥

ನಿಶಾದೌ ಕ್ರೀಂ ಚ ಮಾಂ ಪಾತು ದೇವೀ ಶ್ರೀಷೋಡಶಾಕ್ಷರೀ ।

ಅರ್ಧರಾತ್ರೇ ಚ ಮಾಂ ಪಾತು ಕ್ರೀಂ ಹೂಂ ಭೈಂ ಛಿನ್ನಮಸ್ತಕಾ । ೨೪ ॥

ನಿಶಾವಸಾನ ಸಮಯೇ ಪಾತು ಮಾಂ ಕ್ರೀಂ ಚ ಪಂಚಮೀ ।

ಪೂರ್ವೇ ಮಾಂ ಪಾತು ಶ್ರೀಂ ಹ್ರೀಂ ಕ್ಲೀಂ ರಾಜ್ಞೀ ರಾಜ್ಯಪ್ರದಾಯಿನೀ ॥ ೨೫ ॥

ಓಂ ಹ್ರೀಂ ಹೂಂ ಮಾಂ ಪಶ್ಚಿಮೇವ್ಯಾತ್ಸರ್ವದಾ ತತ್ತ್ವರೂಪಿಣೀ ।
ಐಂ ಸೌಃ ಮಾಂ ದಕ್ಷಿಣೇ ಪಾತು ದೇವೀ ದಕ್ಷಿಣಕಾಲಿಕಾ ॥ ೧೬ ॥

ಐಂ ಕ್ಲೀಂ ಮಾಮುತ್ತರೇ ಪಾತು ರಾಜರಾಜೇಶ್ವರೀ ತಥಾ ।
ವ್ರಜಂತಂ ಪಾತು ಮಾಂ ಶ್ರೀಂ ಹೂಂ ತಿಷ್ಠಂತಂ ಕ್ರೀಂ ಸದಾವತು ॥ ೧೭ ॥

ಪ್ರಬುಧಂ ಹೂಂ ಸದಾ ಪಾತು ಸುಪ್ತಂ ಮಾಂ ಪಾತು ಸರ್ವದಾ ।
ಆಗ್ನೇಯೇ ಕ್ರೀಂ ಸದಾ ಪಾತು ನೈರೃತ್ಯೇ ಹೂಂ ತಥಾವತು ॥ ೧೮ ॥

ವಾಯವ್ಯೇ ಕ್ರೀಂ ಸದಾ ಪಾಯಾದೈಶಾನ್ಯಾಂ ಭೈಂ ಸದಾವತು ।
ಉರ್ಧ್ವಂ ಕ್ರೀಂ ಮಾಂ ಸದಾ ಪಾತು ಹ್ಯಧಸ್ತಾ ಹ್ರೀಂ ತಥೈವತು ॥ ೧೯ ॥

ಚೌರತೋಽಪಾಪ್ತಿಭೀತಿಭ್ಯಃ ಪಾಯಾನ್ಮಾಂ ಶ್ರೀಂ ಶಿವೇಶ್ವರೀ ।
ಯಕ್ಷಭೂತಪಿಶಾಚಾದಿ ರಾಕ್ಷಸೇಭ್ಯೋಽವತಾತ್ಸದಾ ॥ ೨೦ ॥

ಐಂ ಕ್ಲೀಂ ಸೌಃ ಹೂಂ ಚ ಮಾತಂಗೀಚೋಚ್ಛಿಷ್ಟಪದರೂಪಿಣೀ ।
ದೈತ್ಯಭೂಚರಭೀತಿಭ್ಯೋಽವತಾದ್ ದ್ವಾವಿಂಶದಕ್ಷರೀ ॥ ೨೧ ॥

ವಿಸ್ಮಾರಿತಂ ತು ಯತ್ಸ್ಥಾನಂ ಯತ್ಸ್ಥಾನಂ ನಾಮವರ್ಜಿತಂ ।
ತತ್ಸರ್ವಂ ಪಾತು ಮೇ ನಿತ್ಯಂ ದೇವೀ ಭೈಂ ಭದ್ರಕಾಲಿಕಾ ॥ ೨೨ ॥

ಇತೀದಂ ಕವಚಂ ದೇವಿ ಸರ್ವಮಂತ್ರಮಯಂ ಪರಂ ।

ಜಗತ್ಮಂಗಲನಾಮೇದಂ ರಹಸ್ಯಂ ಸರ್ವ ಕಾಮಿಕಂ ॥ ೩೩॥

ರಹಸ್ಯಾತಿ ರಹಸ್ಯಂ ಚ ಗೋಪ್ಯಂ ಗುಪ್ತತರಂ ಕಲೌ ।

ಮಂತ್ರಗರ್ಭಂ ಚ ಸರ್ವಸ್ವಂ ಭದ್ರಕಾಲ್ಯಾ ಮಯಾಸ್ಮೃತಂ ॥ ೩೪ ॥

ಅದೃಷ್ಟವ್ಯಮವಕ್ತವ್ಯಂ ಅದಾತವ್ಯಮವಾಚಿಕಂ ।

ಅಶ್ರೋತವ್ಯಮಿದಂ ವರ್ಮ ದೀಕ್ಷಾಹೀನಾಯ ಪಾರ್ವತಿ ॥ ೩೫॥

ಅಭಕ್ತೇಭ್ಯೋಪಿಪುತ್ರೇಭ್ಯೋ ದತ್ವಾ ನರಕ ಮಾಪ್ನುಯಾತ್ ।

ದಾತವ್ಯಮಭಕ್ತೇಭ್ಯೋ ಭಕ್ತೇಭ್ಯೋ ದೀಯತೇ ಸದಾ ॥ ೩೬॥

ಮಹಾದಾರಿದ್ರ್ಯ ಶಮನಂ ಮಹಾಮಂಗಲವರ್ಧನಂ ।

ಭೂರ್ಜತ್ವಚಿ ಲಿಖೇದ್ದೇವಿ ರೋಚನಾ ಚಂದನೇನ ಚ ॥ ೩೭॥

ಶ್ವೇತಸೂತ್ರೇಣ ಸಂವೇಷ್ಟ್ಯ ಧಾರಯೇನ್ಮೂರ್ಧ್ನಿ ವಾ ಭುಜೇ ।

ಮೂರ್ಧ್ನಿ ಧೃತ್ವಾ ಚ ಕವಚಂ ತ್ರೈಲೋಕ್ಯವಿಜಯಂ ಭವೇತ್ ॥ ೩೮ ॥

ಭುಜೇ ಧೃತ್ವಾ ರಿಪುಂಜಿತ್ವಾ ರಣೇ ಜಯಮವಾಪ್ನುಯಾತ್ ।

ಇತೀದಂ ಕವಚಂ ದೇವಿ ಮೂಲಮಂತ್ರೈಕ ಸಾಧನಂ ॥ ೩೯॥

ಗುಹ್ಯಂ ಗೋಪ್ಯಂ ಪರಂ ಪುಣ್ಯಂ ಗೋಪನೀಯ ಸ್ವಯೋನಿವತ್ .

॥ ಇತಿ ಶ್ರೀಭೈರವೀತಂತ್ರೇ ಭದ್ರಕಾಲೀಕವಚಂ ಸಂಪೂರ್ಣಂ ॥

< String name = “ Sri bhdrakali astakam “ >ಶ್ರೀ ಭದ್ರಕಾಳಿ ಅಷ್ಟಕಂ\n\n

ಸುತ್ರಾಮಾರ್ಚಿತಜಾದಾಬ್ಜಾಂ ಸುಖಸೌಭಾಗ್ಯದಾಯಿನೀಂ ।

ವೀರಭದ್ರ ಸತೀಂ ಶಿವಾಂ ಭದ್ರಕಾಳೀಂ ನಮಾಮ್ಯಹಂ ॥ 1 ॥

ಕಾಳರಾತ್ರೀಂ ಮಹಾವೇಗಾಂ ವೀರಭದ್ರಪ್ರಿಯಾಂ ಹಿತಾಂ ।

ಭಕ್ತಾನಾಂ ಭದ್ರದಾಯಿನ್ಯಾಂ ಭದ್ರಕಾಳೀಂ ನಮಾಮ್ಯಹಂ ॥ 2 ॥

ರುದ್ರಾಣೀಂ ರುದ್ರ ವನಿತಾಂ ರುದ್ರೈಕಾದಶ ರೂಪಿಣೀಂ ।

ರುದ್ರಾಕ್ಷಮಾಲಿನೀಂ ರುದ್ರೀಂ ಭದ್ರಕಾಳೀಂ ನಮಾಮ್ಯಹಂ ॥ 3 ॥

ದಕ್ಷಜ್ಞಾನಲ ಧ್ವಂಸೀಂದಳಿತಾಮರ ಡಾಂಬಿಕಾಂ ।

ವೀರಭದ್ರಾಮೋದ ಕರೀಂ ಭದ್ರಕಾಳೀಂ ನಮಾಮ್ಯಹಂ ॥ 4 ॥

ರುದ್ರಕೋಪ ಸಮುದ್ಭೂ ಭದ್ರಾಂ ಮುದ್ರಾಂ ಶಿವಂ ಕರೀಂ ।

ಕಾಮರೂಪಾಂ ಮಹಾವಿದ್ಯಾಂ ಭದ್ರಕಾಳೀಂ ನಮಾಮ್ಯಹಂ ‖ 5 ‖

ದೇವದುರ್ಗಂ ಮಹಾದುರ್ಗಾಂ ಸ್ವಪ್ನದುರ್ಗಾಷ್ಟ ಭೈರವೀಂ ।

ಚಂಡಿಕಾಂ ಚಂಡರೂಪಿಣ್ಯಾಂ ಭದ್ರಕಾಳೀ ನಮಾಮ್ಯಹಂ ‖ 6 ‖

ಸ್ಥಂಭಿನೀಂ ಕ್ಷೋಭಿಣೀಂ ಮಾರೀಂ ಭ್ರಾಮಿಣೆಂ ಶತೃಮದ್ದಿನೀಂ ।

ಮೋಹಿನೀಂ ದ್ವೇಷಿಣೀಂ ವೀರಾಂ ಭದ್ರಕಾಳೀಂ ನಮಾಮ್ಯಹಂ ‖ 7 ‖

ಕೈಲಾಸಂ ನಿಲಯಾಂ ಶುಭ್ರಾಂ ಪ್ರತ್ಯಕ್ಷ ಪರಮೇಶ್ವರೀಂ ।

ಬ್ರಹ್ಮಾದಿ ಸುರ ಸಂಸೇವ್ಯಾಂ ಭದ್ರಕಾಳೀಂ ನಮಾಮ್ಯಹಂ ‖ 8 ‖

‖ ಓಂ ಹ್ರೀಂ ಭಂ ಭಂ ಭದ್ರಕಾಳ್ಯೈ ನಮಃ ‖ </string>

< String name = “ Sri bhadrakali astotthara sathanamavali > ಶ್ರೀ ಭದ್ರಕಾಳಿ ಅಷ್ಟೋತ್ತರ ಶತನಾಮಾವಳಿ\n\n

ಓಂ ಅಖಿಲಾಗಮ ಸಂಸ್ತುತ್ಯಾಯೈ ನಮಃ

ಓಂ ಅನಂತಾನಂದದಾಯಿನ್ಯೈ ನಮಃ

ಓಂ ಆಖಂಡಲ ಸುಪೂಜ್ಯಾಂಘ್ರ್ಯೈ ನಮಃ

ಓಂ ಆಪನ್ನಾರ್ತಿ ವಿದಾರಿಣ್ಯೈ ನಮಃ

ಓಂ ಇಂದುಮಂಡಲ ಸಂಪೂಜ್ಯಾಯ್ಯೈ ನಮಃ

ಓಂ ಇನಗರ್ವಾಪಹಾರಿಣ್ಯೈ ನಮಃ

ಓಂ ಈಶ್ವರ್ಯೈ ನಮಃ

ಓಂ ಪರಮಾಯೈ ನಮಃ

ಓಂ ಶೈವೈ ನಮಃ

ಓಂ ಈಡಿತಾತ್ಮ ಸ್ವರೂಪಿಣ್ಯೈ ನಮಃ ‖ 10 ‖

ಓಂ ಉದ್ಧೃತಾಖಿಲ ಭಕ್ತೌಘಾಯೈ ನಮಃ

ಓಂ ಉಡುರಾಜ ವಿಭೂಷಣಾಯೈ ನಮಃ

ಓಂ ಊರ್ಜಿತಾತ್ಮ ಗುಣಾಯೈ ನಮಃ

ಓಂ ಶಾಂತಾಯೈ ನಮಃ

ಓಂ ಊಹಿತಾನೇಕ ವೈಭವಾಯೈ ನಮಃ

ಓಂ ಏಕವೀರಾಯೈ ನಮಃ

ಓಂ ಅನೇಕ ರೂಪಾಯೈ ನಮಃ

ಓಂ ಏಧಮಾನ ನಿಜಪ್ರಭಾಯೈ ನಮಃ

ಓಂ ಏಕಪುತ್ರ ಪ್ರದಾಯೈ ನಮಃ

ಓಂ ಸಾಧ್ವ್ಯೈ ನಮಃ ‖ 20 ‖

ಓಂ ಏಕೋಪಾಸಕತೋಷಿತಾಯ ನಮಃ

ಓಂ ಐರಾವತ ಗಜಾರೂಢಾಯೆ ನಮಃ

ಓಂ ಆಗಮಾಂತವಿಹಾರಿಣ್ಯೈ ನಮಃ

ಓಂ ಕನ್ಯಾಕುಮಾರ್ಯೆ ನಮಃ

ಓಂ ಕಾಳ್ಯೈ ನಮಃ

ಓಂ ಕಮನೀಯ ಭುಜಾನ್ವಿತಾಯೈ ನಮಃ

ಓಂ ಖಂಡಿತಾಧ್ವರ ವಿಭ್ರಾಜದಾತ್ಮ ವೈಭವ ಶೋಭಿನ್ಯೆ ನಮಃ

ಓಂ ಗಂಧರ್ವ ಕಿನ್ನರಸುರಾನೀಕ ಸಂಪೂಜ್ಯ ಪಾದುಕಾಯೈ ನಮಃ

ಓಂ ಗಾನಲೋಲಾಯೈ ನಮಃ

ಓಂ ಸುಧಾಪಾನ ಮತ್ತಾಯೈ ನಮಃ ॥ 30 ॥

ಓಂ ಗರ್ವಾಪಹಾರಿಣ್ಯೈ ನಮಃ

ಓಂ ಚಾಮುಂಡಾಯೈ ನಮಃ

ಓಂ ಚಂದ್ರರೇಖಾಯೈ ನಮಃ

ಓಂ ಛತ್ರಚಾಮರ ಶೋಭಿನ್ಯೆ ನಮಃ

ಓಂ ಜಾಜೀಪುನ್ನಾಗ ಪುಷ್ಪಾರ್ಚ್ಯಾಯೈ ನಮಃ

ಓಂ ಜಲಕ್ರೀಡಾ ವಿಮೋದಿನ್ಯೆ ನಮಃ

ಓಂ ಝುಂಕಾರಭೃಂಗಾ ಸಕ್ತಾಬ್ಜ ಪಾದುಕಾಯೈ ನಮಃ

ಓಂ ಪರಮೇಶ್ವರ್ಯೈ ನಮಃ

ಓಂ ಡಮರುನಾದ ಕೃತಾನಂದ ತಾಂಡವಾಯೈ ನಮಃ

ಓಂ ಢಾಕಿನ್ಯೈ ನಮಃ ॥ 40 ॥

ಓಂ ಪರಾಯೈ ನಮಃ

ಓಂ ತಂತ್ರಸ್ವರೂಪಾಯೈ ನಮಃ

ಓಂ ತಂತ್ರೇಶ್ಯೈ ನಮಃ

ಓಂ ತನುವಾಗ್ವಿಭವಾಯೈ ನಮಃ

ಓಂ ಅಮಲಾಯೈ ನಮಃ

ಓಂ ದಾನವಾಂತಕರ್ಯೈ ನಮಃ

ಓಂ ಸಾಮ್ರಾಜ್ಯೈ ನಮಃ

ಓಂ ಧನಧಾನ್ಯವಿವರ್ದಿನ್ಯೈ ನಮಃ

ಓಂ ಧರ್ಮರಕ್ಷಣ ದೀಕ್ಷಾಢ್ಯಾಯೈ ನಮಃ

ಓಂ ನಾಗರಾಜ ವಿಭೂಷಿತಾಯೈ ನಮಃ ॥ 50 ॥

ಓಂ ಪಂಚಾಚಾರಪರಾಯೈ ನಮಃ

ಓಂ ಶಕ್ತ್ಯೈ ನಮಃ

ಓಂ ಪಾರ್ವತೀ ಪರಿಚಾರಿಕಾಯೈ ನಮಃ

ಓಂ ಬಲಪ್ರದಾಯಿನ್ಯೈ ನಮಃ

ಓಂ ಕಾಂತಾಯೈ ನಮಃ

ಓಂ ಭಸ್ಮರೇಖಾವಿಭೂಷಿತಾಯೈ ನಮಃ

ಓಂ ಮಹೇಶ್ವರ ಕೃತಾವಾಸಾಯೈ ನಮಃ

ಓಂ ಮನ್ಮಧಾರಿ ಸುಸೇವಿನ್ಯೈ ನಮಃ

ಓಂ ಯಾಗಸಂಪೂರ್ಣ ಫಲದಾಯೈ ನಮಃ

ಓಂ ಯೋಗಸಿದ್ಧಿ ಪ್ರದಾಯಿನ್ಯೈ ನಮಃ ॥ 60 ॥

ಓಂ ರಾಗದ್ವೇಷಾದಿ ರಹಿತಾಯೈ ನಮಃ

ಓಂ ರಾಜರಾಜ ಸುಪೂಜಿತಾಯೈ ನಮಃ

ಓಂ ವೀರಭದ್ರೇಶ್ವರ ಸತ್ಯೈ ನಮಃ

ಓಂ ವೀರಶೈವಾತ್ಮ ಗೋಚರಾಯೈ ನಮಃ

ಓಂ ಷಣ್ಮುಖಾದಿಸ್ತುತಾಯೈ ನಮಃ

ಓಂ ದೇವ್ಯೈ ನಮಃ

ಓಂ ಷಡ್ವಿಧಾಧ್ವವಿಶೋಧಿನ್ಯೈ ನಮಃ

ಓಂ ಷಟ್ ಸ್ಥಲಜ್ಞಾನ ಸಂಪನ್ನಾಯೈ ನಮಃ

ಓಂ ಷಟ್ ತ್ರಿಂಶತತ್ತ್ವಬೋಧಿನ್ಯೈ ನಮಃ

ಓಂ ಷಡೂರ್ಮಿ ರಹಿತಾಯೈ ನಮಃ ‖ 70 ‖

ಓಂ ಶ್ರೌತಶೈವಾಚಾರ ಪರಾಯಣಾಯೈ ನಮಃ

ಓಂ ಷಟ್ ಲಿಂಗತತ್ತ್ವಬೋಧಾಢ್ಯಾಯೈ ನಮಃ

ಓಂ ಶಿವದೂತ್ಯೈ ನಮಃ

ಓಂ ಶಿವಪ್ರಿಯಾಯೈ ನಮಃ

ಓಂ ಸರ್ವಾಂತರ್ಯಾಮಿನ್ಯೈ ನಮಃ

ಓಂ ಸಾಂಗವೇದ್ಧಾಧ್ಯೇತೃಸುತೋಷಿತಾಯೈ ನಮಃ

ಓಂ ಹರಾತ್ಮಜಪರಾಯೈ ನಮಃ

ಓಂ ನಿತ್ಯಾಯೈ ನಮಃ

ಓಂ ಹರಿಬ್ರಹ್ಮಾದಿ ಸೇವಿತಾಯೈ ನಮಃ

ಓಂ ಕ್ಷಮಾಯೈ ನಮಃ ‖ 80 ‖

ಓಂ ಕಾಂತ್ಯೈ ನಮಃ

ಓಂ ಧೃತ್ಯೈ ನಮಃ

ಓಂ ಮೇಧಾಯೈ ನಮಃ

ಓಂ ಕ್ಷರಾ ಕ್ಷರವಿಹಾರಿಣ್ಯೈ ನಮಃ

ಓಂ ಕ್ಷತ್ರತ್ರಾಣ ಪರಾಯೈ ನಮಃ

ಓಂ ಭದ್ರಕಾಳ್ಯೈ ನಮಃ

ಓಂ ದುರ್ಗಾಯೈ ನಮಃ

ಓಂ ಯಶಸ್ವಿನ್ಯೈ ನಮಃ

ಓಂ ಕಾರುಣ್ಯಪೂರ್ಣ ಹೃದಯಾಯೈ ನಮಃ

ಓಂ ದಿವ್ಯಾಲಂಕಾರ ಭೂಷಿತಾಯೈ ನಮಃ ॥ ೯೦ ॥

ಓಂ ರುದ್ರಕೋಪಸಮುದ್ಭೂತಾಯೈ ನಮಃ

ಓಂ ರೋಷತಾಮ್ರಾಕ್ಷಶೋಭಿನ್ಯೈ ನಮಃ

ಓಂ ನಿರ್ಗುಣಾಯೈ ನಮಃ

ಓಂ ನಿರಹಂಕಾರಾಯೈ ನಮಃ

ಓಂ ಲೋಕಕಲ್ಯಾಣ ಕಾರಿಣ್ಯೈ ನಮಃ

ಓಂ ಕೈಲಾಸ ನಿಲಯಾವಾಸಾಯೈ ನಮಃ

ಓಂ ಖನಕಲಕ್ಷೇತ್ರವಾಸಿನ್ಯೈ ನಮಃ

ಓಂ ನಂದಗಿರ್ಯಾದಿ ಭೂಕ್ಷೇತ್ರ ಸುಖಸಂಚಾರ ಮಂಡಿತಾಯೈ ನಮಃ

ಓಂ ಸತ್ಯಜ್ಞಾನಮುಖಾನಂತ ಕಲ್ಯಾಣಗುಣ ಸಂಯುತಾಯೈ ನಮಃ

ಓಂ ದಕ್ಷಯಾಗಧ್ವಂಸಕರ್ಯೈ ನಮಃ ॥ 100 ॥

ಓಂ ಶೈವಾನಂದ ವಿಧಾಯಿನ್ಯೈ ನಮಃ

ಓಂ ಭೀಷಣಾಸ್ಯಾಯೈ ನಮಃ

ಓಂ ಮನೋಗತ್ಯೈ ನಮಃ

ಓಂ ಭೂತಪ್ರೇತಪಿಶಾಚಾದಿ ಹಾರಿಣ್ಯೈ ನಮಃ

ಓಂ ಸುಮನಸ್ವಿನ್ಯೈ ನಮಃ

ಓಂ ತಪಃಸಿದ್ಧಿ ಪ್ರದಾತ್ರ್ಯೈ ನಮಃ

ಓಂ ವೀರಭದ್ರ ಸಹಾಯಿನ್ಯೈ ನಮಃ

ಓಂ ಭದ್ರಕಾಳೀ ಮಹಾದೇವ್ಯೈ ನಮಃ ॥ 108 ॥

॥ ಇತಿ ಶ್ರೀ ಭದ್ರಕಾಳೀ ಅಷ್ಟೋತ್ತರ ಶತನಾಮಾವಳಿ ಸಂಪೂರ್ಣಂ ॥ </string>

< String name = “ Sri bhadrakali stuthi “ > ಶ್ರೀ ಭದ್ರಕಾಳಿ ಸ್ತುತಿ \n\n

ರಾಗ ದ್ವೇಷಾದಿ ರಹಿತಾ ರಾಜ ರಾಜ ಸುಪೂಜಿತ

ವೀರಭದ್ರೇಶ್ವರ ಸತೀ ವೀರಶೈವಾತ್ಮ ಗೋಚರಾ

ಷಣ್ಮುಖಾದಿಸ್ತುತಾದೇವಿ ಷಡ್ವದಾಧ್ವ ವಿಶೋಧಿನಿ

ಷಟ್‌ಸ್ಥಲ ಜ್ಞಾನ ಸಂಪನ್ನ ಷಟ್ ತ್ರಿಂಶತ್ರತ್ವ ಬೋಧಿನಿ

ಷಡೂರ್ಮಿ ರಹಿತಾ ಶ್ರೌತ ಶೈವಾಚಾರ ಪರಾಯಣಾ

ಷಡ್ ಲಿಂಗ ತತ್ತ್ವ ಬೋಧಾಡ್ಯ ಶಿವದೂತಿ ಶಿವಪ್ರಿಯಾ

ಪಂಚಾಚಾರ ಪರಾಶಕ್ತಿಃ ಪಾರ್ವತಿ ಪರಿಚಾರಿಕಾ

ಬಲಪ್ರದಾಯಿನಿ ಕಾಂತಾ ಭಸ್ಮರೇಖಾವಿಭೂಷಿತಾ

ಇಂದು ಮಂಡಲ ಸಂಪೂಜ್ಯ ಇನಗರ್ವಾಹಾರಿಣೀ

ಈಶ್ವರೀ ಪರಮಾಶೈವೀ ಈಡಿತಾತ್ಮ ಸ್ವರೂಪಿಣೀ

ಕ್ಷಮಾ ಕಾಂತಿರ್ಧ್ಯತಿರ್ಮೇಧಾ ಕ್ಷರಾಕ್ಷರ ವಿಹಾರಿಣೀ

ಕ್ಷತ ತ್ರಾಣ ಪರಾ ಭದ್ರಕಾಳೀ ದುರ್ಗಾ ಯಶಸ್ವಿನೀ

- ಸ್ಕಂದ ಪುರಾಣ </string>

< String name = " Sri veerabhadra guggala information" >ಶ್ರೀ ವೀರಭದ್ರ ಗುಗ್ಗುಳದ ಬಗ್ಗೆ ಮಾಹಿತಿ \n\n

ಸಾಂಪ್ರದಾಯಿಕವಾಗಿ ಶ್ರೀವೀರಭದ್ರ ದೇವರನ್ನು ಪೂಜಿಸುವವರು ಮನೆಯಲ್ಲಿ ವಿವಾಹ ಕಾರ್ಯದಲ್ಲಿ ಮೊದಲು ಗುಗ್ಗಳವನ್ನು ಮಾಡುತ್ತಾರೆ. ಮನೆತನದ ಏಳಿಗೆಯ ಸಲುವಾಗಿ ಮಕ್ಕಳ ಲಗ್ನದಲ್ಲಿ ಮೊದಲು ಗುಗ್ಗಳವನ್ನು ಮಾಡುವ ಪದ್ಧತಿ ಹಿಂದಿನ ಹಿರಿಯರಿಂದ ನಡೆದುಬಂದ ಸಾಂಪ್ರದಾಯಿಕವಾಗಿದೆ. ಆದ್ದರಿಂದ ಈಗಿನವರಿಗೆ ಗುಗ್ಗುಳವೆಂದರೇನು ಎಂಬುದು ತಿಳಿಯದೆ ಅವರನ್ನು ಕೇಳು ಇವರನ್ನು ಕೇಳು ಅನ್ನುವಂಥ ಪ್ರಸಂಗ ಬರಬಾರದೆಂದು ಮೊದಲಿಗೆ ಗುಗ್ಗುಳದ ಬಗ್ಗೆ ನಮಗೆ ತಿಳಿದಷ್ಟು ಬರೆಯಲಾಗಿದೆ.

ಗುಗ್ಗುಳ ಕೊಡಕ್ಕೆ ಒಂದು ಫೂಟು ಉದ್ದ ಹಾಗೂ ಮೂರು ಇಂಚು ದಪ್ಪ ಉಳ್ಳ 2 ಕಟ್ಟಿಗೆಗಳನ್ನು ತರಬೇಕು. ಕಟ್ಟಿಗೆಗಳು ಗಂಧದ್ದು ಇಲ್ಲವೇ ಇಂಗಳದವು ಇರಬೇಕು. ಗುಗ್ಗುಳ ಮಾಡುವ ದಿನಕ್ಕಿಂತ ಒಂದೆರಡು ದಿನ ಮೊದಲು ಕಟ್ಟಿಗೆ ತರಬೇಕು.ಕಟ್ಟಿಗೆಗಳು ಹಸಿ ಇರಬೇಕು ಗುಗ್ಗುಳದ ದಿನಕ್ಕಿಂತ ಒಂದು ದಿನ ಮೊದಲೇ ಬಡಿಗೇರವನಿಗೆ ಉಲಿಪಿಕೊಟ್ಟು ಕಟ್ಟಿಗೆಗಳನ್ನು ತಯಾರು ಮಾಡಲಿಕ್ಕೆ ಕೊಡಬೇಕು. ಉಲಿಪೆ ಅಂದರೆ 500 ಗ್ರಾಂ ಕಡ್ಲೆಬೇಳೆ, (ಎರಡು ಚಟಾಕು) 500 ಗ್ರಾಂ ಅಕ್ಕಿ, 500 ಗ್ರಾಂ ಗೋಧಿ ಹಿಟ್ಟು, 250 ಗ್ರಾಂ ಬೆಲ್ಲ, 100 ಗ್ರಾಂ ಹುಣಸೆಹಣ್ಣು ಮತ್ತು 5 ರೂಪಾಯಿ ದಕ್ಷಿಣೆ ಪ್ರಕಾರ ಕೊಡುವುದಕ್ಕೆ ಉಲಪೆ ಎನ್ನುತ್ತಾರೆ. ಅಲ್ಲದೆ ಭೊಗೋಳ ಕೊಡದ ಕಟ್ಟಿಗೆಗಳನ್ನು ತರುವಾಗ ಬಡಿಗೇರವನಿಗೆ ಎರಡುವರೆ ರೂಪಾಯಿ ಬಾಬು ಕೊಡಬೇಕು.

ಗುಗ್ಗುಳ ಕೊಡಗಳನ್ನು ತಯಾರಿಸಲು ಕುಂಬಾರನಿಗೆ ಮುಂಚಿತವಾಗಿ ಹೇಳಿರಬೇಕು. ಗುಗ್ಗುಳ ಮಾಡುವ ದಿನಕ್ಕಿಂತ ಒಂದು ದಿನ ಮೊದಲೇ ಸಾಯಂಕಾಲ ಗುಗ್ಗಳಕೊಡಗಳನ್ನು ತೆಗೆದುಕೊಂಡು ಸಮೀಪದ ದೇವಸ್ಥಾನದಲ್ಲಾಗಲಿ, ಮಠದಲ್ಲಾಗಲಿ ಬರಲು ತಿಳಿಸಬೇಕು. ಒಟ್ಟು ಮೂರು ಕೊಡಗಳು, 2 ಮಗಿ, 11 ಮುಚ್ಚುಳ (ಪರಡಿ)

ತೆಗೆದುಕೊಂಡು ಬರಲು ತಿಳಿಸಿರಬೇಕು. ಎರಡು ಕೊಡಗಳನ್ನು ತರಿಸಬಾರದು. ಏಕೆಂದರೆ ಕೊಡವನ್ನು ಕಟೆಯುವಾಗ ಕೊಡಕ್ಕೆ ಏನಾದರೂ ಧಕ್ಕೆ ಆದರೆ ಮತ್ತೊಂದು ಕೊಡವನ್ನು ಉಪಯೋಗಿಸಲು ಬರುತ್ತದೆ. ಆದ್ದರಿಂದ ಮೂರು ಕೊಡಗಳನ್ನು ತರಿಸಬೇಕು. ಕುಂಬಾರನು ಕೊಡಗಳನ್ನು ತಂದ ಮೇಲೆ ದೇವಸ್ಥಾನದಲ್ಲಿ ಕರೆ ಕಂಬಳಿಯನ್ನು ಹಾಸಿ, ಅದರಮೇಲೆ 3 ಕೊಡಗಳನ್ನು, ಮಗಿಗಳನ್ನು, ಮುಚ್ಚಳಗಳನ್ನು ಇಟ್ಟು ಪೂಜೆಮಾಡಿ ಮೇಲೆ ಹೇಳಿದ ಪ್ರಕಾರ ಉಲಿಪೆ ಕೊಟ್ಟು ಕೊಡಗಳನ್ನು ಲಗ್ನದ ಮನೆಗೆ ತರಬೇಕು. ನಂತರ ಐದು ಜನ ಪುರವಂತರ ಮನೆಗೆ ಹೋಗಿ ಉಲುಪೆ ಕೊಟ್ಟು ಹೇಳಿ ಬರಬೇಕು. ಐದು ಜನ ಪುರವಂತರಿಗೆ ಹೇಳಲಾಗದ್ದಿದ್ದರೂ ಇಬ್ಬರೂ ಪುರವಂತರಿಗಾದರೂ ಹೇಳಬೇಕು.

ಗುಗ್ಗುಳ ಕಟ್ಟಿಗೆಗೆ ಸಿಂಬಿ ಮಾಡಲಿಕ್ಕೆ 11 ಕಟಗಿ ತೆಳುವಾದ ಅರಿವೆಯನ್ನು ತಂದು ಮಡಿ ನೀರಿನಲ್ಲಿ ಒಗೆದು ಹಿಂಡಿ ಒಣಗಿಸಬೇಕು. ನಂತರ ಮೂರು ಸಿಂಬೆಗಳನ್ನು ಮಾಡಿ ಒಂದು ಗುಗ್ಗುಳ ಕಟ್ಟಿಗೆಗೆ ಮೂರರಂತೆ ಹಾಕಬೇಕು. ಗುಗ್ಗುಳವನ್ನು ಸಮೀಪದ ದೇವಸ್ಥಾನಕ್ಕೆ ಇಳುವದಿದ್ದರೆ 9 ಕಟಗೆ ಅರಿವಿ ತಂದು ನಾಲ್ಕು ಸಿಂಬಿ ಮಾಡಬೇಕು. 2 ಸಿಂಬಿಗಳನ್ನು ಒಳ್ಳೆ ಎಣ್ಣೆಯಲ್ಲಿ ನೆನೆಹಾಕಿ ಗುಗ್ಗುಳ ಕಟ್ಟಿಗೆಗೆ ಎರಡರಂತೆ ಹಾಕಬೇಕು. ಗುಗ್ಗುಳ ಕೊಡವನ್ನು ಕಡಿಯುವ ಮುಂಚೆ ಮನೆಯನ್ನು ಸಾರಿಸಿ ಒಳ್ಳೆ ಮಡಿಯಿಂದ ಕೊಡವನ್ನು ಕಟೆಯಲಿಕ್ಕೆ ಪ್ರಾರಂಭ ಮಾಡಬೇಕು. ಅದೇ ಕಾಲಕ್ಕೆ ಹೆಣ್ಣುಮಕ್ಕಳು ಮಡಿಯಿಂದ ಗುಳಿಗೆಯನ್ನು ಮಾಡಬೇಕು. ಮುಂಜಾನೆ ಗುಳಿಗಿ ಹುಗ್ಗಿಯನ್ನು ತಯಾರಿಸಿ ಗುಗ್ಗುಳ ಕೊಡಕ್ಕೆ ಎಡೆ ಮಾಡಬೇಕು. 11 ಪರಡಿ (ಮುಚ್ಚುಳ)ಗಳಲ್ಲಿ ಗುಳಿಗಿ ಹುಗ್ಗಿ, 2 ಎಣ್ಣೆ ಹೋಳಿಗೆ (ಹಿರಿಯಕ್ಕಿ ಹೊಳಿಗೆ), ಒಂದು ಲಿಂಬೆ ಹಣ್ಣು ಎಲೆ ಅಡಿಕೆ ಮತ್ತು ಒಂದು ರೂಪಾಯಿ ಇಡಬೇಕು.

ಗುಗ್ಗುಳ ಕೊಡಕಾಗಿ ಮೊದಲೇ ಕಾಕಳ್ಳುಗಳನ್ನು (ಬಿದ್ದು ಒಣಗಿದ ಆಕಳ ಸಗಣಿ) ತಂದಿಟ್ಟು ಕೊಂಡಿರಬೇಕು. ಕಾಕಳ್ಳುಗಳನ್ನು ಸುಟ್ಟು ಬೂದಿಯನ್ನು ಮತ್ತು ಕಣಕ (ನೀರು ಹಾಕಿ ಕಲಿಸಿದ ಗೋಧಿಹಿಟ್ಟು), 2ಕೆಜಿ ಜವಾರ ಹತ್ತಿಕಾಳು, 25 ಗ್ರಾಂ ಗುಗ್ಗುಳ (ಧೂಪ) ಇವುಗಳಿಂದ ಗುಗ್ಗುಳ ಕಟ್ಟಿಗೆಯನ್ನು ಕೊಡದಲ್ಲಿ ಇಟ್ಟು, ಕಟ್ಟಿಗೆಗೆ ಗಟ್ಟಿಯಾಗಿ ನಿಲ್ಲುವಂತೆ ಸರಿಯಾದ ಪ್ರಮಾಣದಲ್ಲಿ ತುಂಬಬೇಕು. ಇಷ್ಟು ಆದಮೇಲೆ ಮಜಲಿ ನೊಂದಿಗೆ ಪುರವಂತರನ್ನು ಕರೆಯಲು ಹೋಗಬೇಕು. ಪುರವಂತರು ಬಂದಮೇಲೆ ಅವರಲ್ಲಿ ಇರೇ ಪುರವಂತರು ವಡಪನ್ನು ಹೇಳುತ್ತಾ ಉತ್ತಮವಾದ ಕರ್ಪೂರದಿಂದ ಗುಗ್ಗುಳ ಪುಟು ಮಾಡಬೇಕು. ಎರಡು ಮಗಿಗಳಲ್ಲಿ ಪಾದೋದಕ ಹಾಕಿ ಎಲ್ಲಾ ಕಡೆಗೂ ಪಾದೋದಕ ಸಿಂಪಡಿಸಬೇಕು.

ಗುಗ್ಗುಳ ಹೊರಟ ನಂತರ ಎಲ್ಲಿ ದೇವರಗುಡಿಗಳು ಬರುವವೋ ಅಲ್ಲಿ ಪಾದೋದಕ ಹಾಕಿ ಕರಿ ಕಂಬಳಿ ಹಾಸಿ, ಕೊಡಗಳನ್ನು ಇಳಿಸಿ ವಡಪು ಹೇಳಬೇಕು. ಮುಗಿದ ನಂತರ ಕಾಯಿ ಒಡೆದು ಗುಗ್ಗುಳ ಕೊಡವನ್ನು ಸಾಗಿಸಬೇಕು. ನೀವು

ಭೂಗೋಳವನ್ನು ಯಾವ ದೇವರಿಗೆ ಏಳುವ ಬೇಕೆಂದು ನಿಶ್ಚಯಿಸಿರುವಿರೋ ಆ ಗುಡಿಯು ಬಂದಮೇಲೆ ಅಲ್ಲಿ ಗುಗ್ಗುಳ ಕೊಡವನ್ನು ಹಿಡಿದು ಮದುಮಕ್ಕಳನ್ನು ಮುತ್ತೈದೆಯರನ್ನು ಕೊಡದ ಬುಡಕ್ಕೆ ಐದು ಸುತ್ತು ಪ್ರದಕ್ಷಿಣೆ ಹಾಯಿಸಬೇಕು. ನಂತರ ದೇವರ ಗುಡಿಯ ಒಳಗೆ ಪ್ರವೇಶ ಮಾಡಿಸಿ, ಮದುಮಗನಿಗೆ ಎಲೆ ಬಾಸಿಂಗ ಕಟ್ಟಬೇಕು. ನಂತರ ದೇವರಿಗೆ ನಮಸ್ಕರಿಸಿ ಮಂಗಳಾರತಿ ಮಾಡಬೇಕು. ಗುಗ್ಗುಳ ಕೊಡಗಳಿಗೆ ಆಕಳ ಹಾಲು ತುಪ್ಪವನ್ನು ಹಾಕಿ ಶಾಂತಗೊಳಿಸಬೇಕು. ತಿರುಗಿ ಬರುವಾಗ ಮದುಮಗನ ಕೈಯಲ್ಲಿ ಕೈಕೋಳ (ದೀವಟಿಗೆ)ಯನ್ನು ಕೊಡಬೇಕು. ಮಧುಮಗಳ ಕೈಯಲ್ಲಿ ಆರತಿಯನ್ನು ಕೊಡಬೇಕು. ಲಗ್ನದ ಮನೆಗೆ ಬಂದನಂತರ 11 ಪರಡಿಗಳನ್ನು ಹಂಚಬೇಕು. ಐದು ಜನ ಪುರವಂತರರಿಗೆ ಒಬ್ಬೊಬ್ಬರಿಗೆ ಒಂದೊಂದು, ದೈವದವರಿಗೆ 2, ಕರಡಿಮಜಲು ನವರಿಗೆ 2, ಅಯ್ಯನವರಿಗೆ 1, ಪರಸ್ಥಳದ ಅಯ್ಯನವರಿಗೆ 1 ಈ ಪ್ರಕಾರ ಪರಡಿಯನ್ನು ಕೊಟ್ಟು ಕಳಿಸಬೇಕು. ಇಲ್ಲಿಗೆ ಗುಗ್ಗುಳ ಕಾರ್ಯವು ಮುಗಿಯುವುದು.

ಕೃಪೆ:- ಶ್ರೀ ಶಂಕ್ರಪ್ಪ ತೊಂಡಿಹಾಳು, ಬೆಟಗೇರಿ. </string>

< String name = “ Sri veerabhadra vadapugalu 1 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಅಹಾ ವೀರಾ । ನಮ್ಮ ಕಾರೇಕಲ್ಲು ಶ್ರೀ ವೀರಭದ್ರ ದೇವರು ಹುಟ್ಟಿ ಬರುತ್ತಲೆ ಏನೇನು ಶೃಂಗಾರವೆಂತೆಂದೊಡೆ । ವಿಚಿತ್ರದ ನಡುಕಟ್ಟು । ಪರ ಭಯಂಕರವಾದ ವೀರಗತ್ತಿ । ಕರದಲ್ಲಿ ವೀರಕಂಕಣ । ಕಾಲಲ್ಲಿ ಸಾವಿರ ಗೆಜ್ಜೆ । ಪಾದದಲ್ಲಿ ಮನೋವೇಗದ ಹಾವಿಗೆ । ಬಲದ ಕೈಯಲ್ಲಿ ವಜ್ರದ ಮುದ್ರಿಕೆ ಉಂಗುರ । ಸಾವಿರ ತೋಳಿನಲ್ಲಿ ಪರುಷ ಗಧ ಕೂರ್ಮ ಡಿಂಡಿವಾಳ । ಕತ್ತಿ ಕೋಮರ ಕಠಾರಿ । ಪಾಶ ಜಮದಂಡಿ । ಈಟಿ ಮಸಲಿ ಮದ್ಗರ । ಬಾಣ ಬಿಲ್ಲು । ಇಂತಿಷ್ಟು ಬತ್ತಿಸ್ ಆಯುಧಗಳಂ ಪಿಡಿದುಕೊಂಡು । ಕೆಂಗಡಿ ಉಗುಳುವ ಉರಿಗಣ್ಣು । ಕೋರಮೀಸೆ । ಸುರಿಪಲ್ಲು । ಅಂಗಕ್ಕೆ ವಜ್ರದ ಕವಚ । ಹಣೆಯಲ್ಲಿ ವಿಭೂತಿ । ಕೊರಳಲ್ಲಿ ರುಂಡ ಮಾಲೆ । ಕರ್ಣಕ್ಕೆ ನವರತ್ನ ಖಚಿತವಾದ ಕರ್ಣಕುಂಡಲವನ್ನಿಟ್ಟು । ಎಲೆ ಸಬ್ ದೇವತೆಗಳಿಗೆಲ್ಲ ಗಂಡನೆಂಬ ಕಾಲ್ಪೆಂಡೆಯನ್ನಿಟ್ಟು । ದಿಗ್ ದಿಗಿಲ್ ಎಂಬ ಕಾಲ್ಪೆಂಡೆಯನ್ನಿಟ್ಟು । ಚಿಟಿಲ್ ಚಿಟಿಲ್ ಎಂದು ಬಾಕು ಝುಳ್ಪಿಸಿ । ಕಣ್ಣು ಗರ್ಗರನೆ ತಿರುಗಿ । ಕೋ ಎಂದು ಕೂಗಿ ದಕ್ಷಬ್ರಹ್ಮನ ಯಜ್ಞವಂ ಕೆಡಿಸಿ ಓಡಿಸಿದ ಮಹಾ ವೀರಾಧಿ ವೀರ । ಕಾರೇಕಲ್ಲು ಚನ್ನಿಗ ಚನ್ನವೀರಭದ್ರ । ಅಭಿನಮಗೆ ರುದ್ರ । ಹೀಗೆ ಬರುತ್ತಿದ್ದಾನೆ ನುಡಿಸು ಲಿಂಗಾಂಗಿಯೆ...... </String>

< String name = “ Sri veerabhadra vadapugalu 2 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ । ಕಂಡಿರೋ ಪಿಡಿದು ಹಿಂಡು ದೈತ್ಯರ ಮೇಲೆ ಝುಲ್ಪಿಸುವ ಗಂಡುಗಲಿ ಶರಭಾವತಾರ । ಘರ್ಜಿಸಿದವು ಕಡಲೇಳು ಸಮುದ್ರಂಗಳು ಸರ್ರನೇ ಸರಿದವು । ಆದಿಶೇಷನ ಮುಕುಟವು ಒಡೆಒಡೆದಾಡಿತು । ನಾಗಕನ್ಯಕೆಯರೆಲ್ಲರು ಚಲ್ಲನೆ ಈ ಭೂತಳಕೆ ಚೇರಿದರು । ಭೂಮಿಯು ನಡು ಬಗುರಿಯಂತೆ ತಿರುಗಿತು । ಅತಳ, ವಿತಳ, ತಳಾತಳ, ರಸಾತಳ, ಪಾತಾಳ, ಭೂಲೋಕ, ಭುವರ್ಲೋಕ, ಜನಲೋಕ, ತಪರ್ಲೋಕ, ಸತ್ಯಲೋಕಂಗಳು ತಲ್ಲಣಿಸಿ ತಲೆಕೆಳಗಾದವು । ಹೇ ಗುರು ಸಣ್ಣಾಪುರದ ವೀರಭದ್ರ । ಕಾರೇಕಲ್ಲು ಚೆನ್ನವೀರಭದ್ರ ಹೀಗೆ ಬರುತ್ತಿದ್ದಾನೆ ನುಡಿಸು ಲಿಂಗಾಂಗಿಯೇ....ಕಡೆ ಕಡೆ </String>

< String name = “ Sri veerabhadra vadapugalu 3 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ |ನಮ್ಮ ಶ್ರೀ ವೀರಭದ್ರ ದೇವರು ಹುಟ್ಟಿದಾಗಲೆ ಹೂವಿನಕಾಶಿ | ವಿಷ್ಣು ಕಾಶಿ | ಬ್ರಹ್ಮ ಕಾಶಿ |ಮೆಟ್ಟುವ ಹೊನ್ನಾವಿಗೆ ಸಾವಿರ ಶಿರಸ್ಸು | ಮೂರು ಸಾವಿರ ಕಣ್ಣು | ಎರಡು ಸಾವಿರ ಭುಜ |ಜಂಜುವೇಕ ಮುಂಗಲಿ | ಜಟಾ ಉರುಲು | ಶೆಡಕಿನ ಹಗ್ಗ |ಗಜಾದಾಂಡು ಗಜಾಂಕುಶ | ನಮ್ಮ ಚನ್ನ ವೀರಭದ್ರದೇವರು | ಬತ್ತೀಸ ಆಯುಧ ಹಿಡಿದು | ಕರಗಸದ ಬಾಣ | ಕುಂಜುರದ ಬಾಕು | ಜುಂಜು ಬಿರಿಗಣ್ಣು | ಬಿಲ್ಲು ದರಿನ ಹೆಗ್ಗಾಳಿ ಪಿಡಿಯೋ ಗಂಡಗತ್ತರಿ | ಕೈಯೆಂಬ ಕಠಾರಿ | ಈಟಿ ರಣಚೂರಿ | ರೌದ್ರಕಾರದಿಂದ ಹೊಂಕರಿಸುತ್ತ | ಕೊಲಲೆ ಹರಿದು ಹೋಮಕ್ಕೆ ಬಂದು | ವಿಷ್ಣುವೇ ಮೊದಲಾದ ದೇವತೆಗಳನ್ನು ಸೆರೆ ಹಿಡಿದು । ದಕ್ಷಬ್ರಹ್ಮನ ಶೀರವನ್ನು ಅಗ್ನಿಗೆ ಆಹುತಿಕೊಟ್ಟು। ಸರಸ್ವತಿಯ ಮೂಗನ್ನೆ ಕೊಯ್ದು | ಅಗ್ನಿಯ ನಾಲಿಯನ್ನೆ ಹರಿದು ಸಪ್ತಭಾಗ ಮಾಡಿ | ಅರವತ್ತಾರು ಕೋಟಿ ರಾಕ್ಷಸರನ್ನು ಕೆಂಗಣ್ಣಿನಿಂದ ಸುಟ್ಟು ಕೆಂಡದ ಒಕಳಿಯನ್ನು ಹಾಡುತ್ತಾ ಬರುತ್ತಿರಲು | ದಕ್ಷನ ಪತ್ನಿಯು ಬಂದು ಪಾದಕ್ಕೆ ಎರಗಲು | ಆಗ ನಮ್ಮ ಶ್ರೀವೀರಭದ್ರೇಶ್ವರನು ಅವಳ ಪತಿಗೆ ಕುರಿಯ ತಲೆಯನ್ನಿಟ್ಟು ಕೈಲಾಸಕ್ಕೆ ಬಂದದನ್ನು ಕಂಡು | ಶಿವನು ಭಪ್ಪರೆ ಭಲಾರೆ

ಎಂದು | ರತ್ನಕಚ್ಚಿತ ಸಿಂಹಾಸನದ ಮೇಲೆ ಕುಳ್ಳಿರಿಸಿ ಹೂ ಮಳೆಗರೆದನಯ್ಯ | ಶ್ರೀ ವೀರೇಶ ದೊರೆಯೇ ನಿನಗೆ ಯಾರು ಸರಿಯೇ | ಸರಿ ಸರಿ ಎಂದವರ ಹಲ್ಲು ಮುರಿಯೆ ಬಹುಪರಕ್...... </String>

< String name = " Sri veerabhadra vadapugalu 4 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಅಹಾ ವೀರಾ | ಏಳು ಏಳಯ್ಯ ಶಿವನ ಮೋಹದ ಕುಮಾರನೇ | ಏಳು ಏಳಯ್ಯ ಶಿವನ ಸುತನೆ ನಿನ್ನನು ನಂಬಿದ ಭಕ್ತರಿಗೆ ಪ್ರಿಯನು | ಕಂಗೆಟ್ಟು ರಣಹಲಿಗೆಗೆ ಹೆಗ್ಗಳವಾದ ಖಡೇ ಶಸ್ತ್ರ | ಹನುಮಗಂಡಾ | ಉದ್ದಾನ ವೀರೇಶ | ಗದ್ದುಗೆಯನ್ನು ಬಿಟ್ಟು ಎದ್ದು ಬಾರಪ್ಪ ರುದ್ರ ಕಡೆ ಕಡೆ........</String>

< String name = " Sri veerabhadra vadapugalu 5 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಅಹಾ ವೀರಾ | ಕಡುಕೋಪದಿಂದ | ಜಡೆಗಳನ್ನು ಕಿತ್ತಿಟ್ಟು | ಘುಡಿಘುಡಿಸಿ ಆರ್ಭಟಿಸಿ ಕೊಡು ಕೊಡು ವರವನೆಂದನ್ನುತ್ತ ಬಟ್ಟ ಬೈಲೊಳು ತಟ್ಟನೆ ಎದ್ದು ನಿಂತನಯ್ಯಾ ನಮ್ಮ ವೀರಶೈವ ಅವತಾರಿಕ ಪುಂಡ | ತನಗೆ ಒಲಿಯದ ಮೀರಿ ನಡೆದವರ ಗಂಡ ಭಯಭಕ್ತಿಯಿಂದ ನಡೆದವರ ಕಣ್ಣಲ್ಲಿ ಕಂಡ | ಮಾರಿ ಮಸಣಿಗಳ ಮಿಂಡ | ವಿಧಿಗಂಡ | ವಿಲಾಸಕ್ಕೆ ಪುಂಡ ಬಾಪುರೇ ಸೃಷ್ಠಿಯೊಳ್ ರಟ್ಟಿಹಳ್ಳಿ ಕಟ್ಟುಗ್ರದ ಕಲಿ ವೀರಭದ್ರಾ ಅಭಿನಮಗೆ ರುದ್ರಾ | ಕರುಣಾಸಮುದ್ರ ನಿನ್ನ ಪವಾಡ ಅಂದಿಗುಂಟು ಇಂದಿಗಿಲ್ಲವೆಂದು | ಹೇಳುವಾ ಗೆರೆವಾದಿಗಳಿಗೆ ನೀನೇ ಗಂಡ ಕಡೆ ಕಡೆ....</String>

< String name = " Sri veerabhadra vadapugalu 6 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ನಮ್ಮ ಶ್ರೀ ವೀರಭದ್ರನು ಹುಟ್ಟಿದ ಪರಿಯಂ ಪೇಳ್ವೆ | ನಮ್ಮ ಶಂಕರನ ಮಾವನಾದ ದಕ್ಷಬ್ರಹ್ಮನು ಶಿವನೊಡನೆ ದ್ವೇಷ ಸಾಧಿಸಿ ಯಜ್ಞವನ್ನಾರಂಭಿಸಿದನು | ಅಷ್ಟದಿಕ್ಪಾಲಕ ಹರಿಬ್ರಹ್ಮ ಮೊದಲಾದವರು

ಸಮ್ಮಿಲಿತರಾಗಿ ಅಗ್ನಿ ಪುಟಮಾಡಲಿಕ್ಕೆ ಋತ್ವಿಜರು ವೇದಮಂತ್ರಗಳನ್ನುಚ್ಚರಿಸುತ್ತಿದ್ದರಯ್ಯಾ । ದಕ್ಷಪುತ್ರಿಯರೆಲ್ಲ ಅತಿ ಸಡಗರದಿಂದ ಓಡಾಡುತಿದ್ದರಯ್ಯಾ | ಇದೇ ಸಮಯದಲ್ಲಿ ದಕ್ಷಪುತ್ರಿಯಾದ ದಾಕ್ಷಾಯಣಿಯು ಶಿವನಪ್ಪಣೆ ಇಲ್ಲದೇ ದಕ್ಷನ ಯಜ್ಞಭೂಮಿಗೆ ಬಂದಳಯ್ಯಾ | ತಂದೆಯಾದ ದಕ್ಷನು ಮಗಳನ್ನು ಅವಮಾನಗೊಳಿಸಿ | ಅವಳನ್ನು ತನ್ನ ಎಡಗಾಲಿನಿಂದೊದ್ದು ಹೊರಗೆ ಹಾಕಿದನು || ಇದನ್ನು ನೋಡಿ ದಾಕ್ಷಾಯಣಿಗೆ ಸಹಿಸಿಕೊಳ್ಳುವದಾಗದೆ ಯಜ್ಞಕುಂಡದಲ್ಲಿ ಧುಮುಕಿಬಿಟ್ಟಳು | ಈ ವಾರ್ತೆ ಶಂಕರನಿಗೆ ಮುಟ್ಟಿದೊಡನೆ | ಶಂಕರನು ಅತಿ ಕೋಪದಿಂದ ಜಡೆ ಬಿಚ್ಚಿ ನೆಲಕ್ಕಪ್ಪಳಿಸಿ | ಉರಿನೇತ್ರವನ್ನು ತೆರೆಯಲು ಭಯಂಕರ ಜ್ವಾಲೆಯೊಳಗಿಂದ ಗಂಡುಗಲಿ |ಶ್ರೀ ವೀರಭದ್ರನ ಅವತರಿಸಿ । ವೀರ ಬೊಬ್ಬೆಯಿಡಲು । ನಕ್ಷತ್ರಗಳು ಉದರಿದವು । ಬ್ರಹ್ಮಾಂಡವು ನಡುಗಿತು ಸೂರ್ಯ ಚಂದ್ರರಿಗೆ ದಿಕ್ಕು ತೋಚದಂತಾಯಿತು । ಇಂತಾಗಲಾಕ್ಷಣದಿ ಶ್ರೀ ವೀರಭದ್ರನ ದಕ್ಷ ಯಜ್ಞ ಮಂಟಪ ಪ್ರವೇಶಿಸಿ । ದಕ್ಷನ ಶಿರಕಡಿದು ನೆತ್ತರ ಹರಿಸಿದ । ನಮ್ಮ ವೀರಭದ್ರ ಕರುಣಾ ಕೃಪಾಲ ಕಡೆ ಕಡೆ...... </String>

< String name = " Sri veerabhadra vadapugalu 7 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಗಂಡುಗಲಿ ಶ್ರೀವೀರಭದ್ರ ದೇವರನ್ನು ಮನೆಯ ಜಗುಲಿಯ ಮೇಲಿಟ್ಟು ಪೂಜಿಸುವ ಭಕ್ತರೆಲ್ಲ ನೀವು ಕೇಳಿರಯ್ಯ | ಆಹಾ ದೇವಾ | ಜಗತ್ತಿಗೆ ಒಬ್ಬನೇ ದೇವರು | ಸಾವಿರಾರು ದೇವರನ್ನು ಪೂಜೆ ಮಾಡಿದರೆ | ಗಂಡ ಬಿಟ್ಟ ರೆಂಡೆಯಂತಾಗುವರಯ್ಯ | ಸಕಲ ದೇವರ ದೇವನಾದ ಶಂಕರನು ನಮ್ಮ ಶ್ರೀ ವೀರಭದ್ರ ದೇವರ ಜನಕನಾಗಿರಲು | ಶಿವನೇ ಸರ್ವ ಅಧಿಕನೆಂದು ತಿಳಿಯಬೇಕಯ್ಯ | ಮೂರು ಲೋಕಗಳಿಗೆ ಮುಕ್ಕಣ್ಣನೇ ಅಧಿಕ | ಭಕ್ತರಲ್ಲಿ ಬಸವಣ್ಣನೇ ಅಧಿಕ | ಲಿಂಗಗಳಲ್ಲಿ ಗುರು ಕೊಟ್ಟ ಲಿಂಗವೇ ಅಧಿಕ | ಹೂಗಳಲ್ಲಿ ಮಲ್ಲಿಗೆ ಹೂವೆ ಅಧಿಕ | ಪತ್ರಿಗಳಲ್ಲಿ ಬಿಲ್ವಪತ್ರೆಯೇ ಅಧಿಕ | ಬಣ್ಣಗಳಲ್ಲಿ ಬಿಳಿಬಣ್ಣವೇ ಅಧಿಕ | ಹೆಣ್ಣುಗಳಲ್ಲಿ ಪತಿವ್ರತೆಯೇ ಅಧಿಕ | ಹಣ್ಣುಗಳಲ್ಲಿ ಮಾವಿನ ಹಣ್ಣೆ ಅಧಿಕ | ರಾತ್ರಿಗಳಲ್ಲಿ ಶಿವರಾತ್ರಿಯೇ ಅಧಿಕ | ಕ್ಷೇತ್ರಗಳಲ್ಲಿ ಕಾಶಿ ಕ್ಷೇತ್ರವೇ ಅಧಿಕ | ಮಾನವರಲ್ಲಿ ಜ್ಞಾನಿಯೇ ಅಧಿಕ । ಮಾತಿನಲ್ಲಿ ಮೃದುನುಡಿಯೇ ಅಧಿಕ | ಸರ್ವಗುಣಗಳಲ್ಲಿ ಶಾಂತಿಯೇ ಅಧಿಕ | ಸರ್ವ ದೇವತೆಗಳಲ್ಲಿ ನಮ್ಮ ಶಿವನೇ ಅಧಿಕ | ಈ ನಮ್ಮ ಶಿವನ ಉರಿನೇತ್ರದಿಂದ ಅವತರಿಸಿದ ನಮ್ಮ ಕಲಿ ವೀರಭದ್ರಾ | ಕರುಣಾ ಸಮುದ್ರ | ನಿನ್ನ ಪವಾಡವು ಅಂದಿಗುಂಟು ಇಂದಿಗಿಲ್ಲವೆಂಬ ಶತದ್ರೋಹಿಗಳಿಗೆ ನೀನೇ ಪ್ರಚಂಡ ಕಡೆಕಡೆ.... </String>

< String name = " Sri veerabhadra vadapugalu 8 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಬಾರೋ ಬಾರಯ್ಯ ಕಲಿ ವೀರಭದ್ರ | ನಿನ್ನ ತಾಳತೃಡೆ ಮದ್ದಾಳೆಗೆ ಸರಿಯಾಗಿ ನಿನ್ನ ಗದ್ದುಗೆಯನ್ನು ಬಿಟ್ಟು ಎದ್ದು ಬಾರಪ್ಪ ರುದ್ರಾ | ಹಸ್ತದಲ್ಲಿ ಹಲಗೆ | ಕರದಲ್ಲಿ ಖಡ್ಗ | ನೇತ್ರದಲ್ಲಿ ಪಾವಕ ಜ್ವಾಲೆ | ಮುಖದಲ್ಲಿ ವೇದಸ್ತುತಿ | ಕಾಲಲ್ಲಿ ಘಂಟೆ ಸರಪಳಿಗಳನ್ನು ಧರಿಸಿರುವ ಮಹಾಶೂರ ಎದ್ದು ಬಾರಯ್ಯ | ನಿನ್ನ ಅಬ್ಬರವನ್ನು ಕಂಡು | ಈರೇಳು ಲೋಕದ ಭಕ್ತರು | ಗರ್ಭದ ಸತಿಯರನ್ನೇ ತಂದು | ಆ ಗರ್ಭವನ್ನೇ ಸೀಳಿ ಆ ಗರ್ಭಕ್ಕೆ ಕಲ್ಲು ಮುಳ್ಳುಗಳನ್ನು ತುಂಬಿ | ಆ ಕಲ್ಲುಮುಳ್ಳುಗಳೇ ಪಿಂಡವಾಗಿ | ಭಸಿತವಂ ಪೋಷಿಸುತ ಶಿವಗಣಂಗಳ ಒಡ್ಡೋಲಗಗಳನ್ನು ನಡೆಸುವಂತ ಲಿಂಗಾಗಿಯೇ | ವೀಪರೀತ ನಾಯಕ ಛಲದಂಕ ಮಲ್ಲ | ಆ ನವಬ್ರಹ್ಮರೋಳ್ ಮೇಲಾದ ದಕ್ಷಬ್ರಹ್ಮನ ಶಿರವನ್ನೇ ಹರಿದು | ಹರಿದ ತಲೆಗೆ ಕುರಿ ತಲೆಯನ್ನಿಟ್ಟ ದೊರೆಯೇ ನಿನಗಾರು ಸರಿಯೇ | ಸರಿ ಸರಿ ಎಂದವರ ಸೊಕ್ಕನ್ನು ಮುರಿಯೇ | ಬಹುಪರಾಕ್ ...... </String>

< String name = " Sri veerabhadra vadapugalu 9 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಒಂದಾನೊಂದು ದಿವಸ ನಾರದಮುನಿಗಳು | ಕೈಲಾಸ ದ್ವಾರ ಮುಖ ಮಾಡಿಕೊಂಡು ಕೈಲಾಸಕ್ಕೆ ತೆರಳಲು | ಆ ಕೈಲಾಸ ಪರ್ವತದಲ್ಲಿ ನಮ್ಮ ಶಿವ – ಪಾರ್ವತಿಯರು ಕುಳಿತಿದ್ದರು | ಅದನ್ನು ನೋಡಿದ ನಾರದರು | ಎರಡು ಕೈಗಳಿಂದ ಶಿವ – ಪಾರ್ವತಿಯರಿಗೆ ನಮಸ್ಕಾರವನ್ನು ಮಾಡಿದರು | ಆಗ ನಮ್ಮ ಶಂಕರನು | ಅಹೋ ನಾರದ ಯಾವ ಯಾವ ಲೋಕಗಳನ್ನು ನೋಡಿ ಬಂದಿರಿ ಯಾವ ಯಾವ ವರ್ತಮಾನ ತಂದೀರಿ ಎಂದು ಕೇಳಿದನು | ಆಗ ನಾರದನು ಅಹೋ ಶಂಕರ ಭೂಲೋಕದಲ್ಲಿ ಕಾಣಬಾರದನ್ನು ಕಂಡೆನು ನೋಡಬಾರದನ್ನು ನೋಡಿದೆನೆಂದು ಹೇಳಿದನು | ಆಗ ನಮ್ಮ ಶಂಕರನು | ಅದು ಏನು ಎನ್ನ ಮುಂದೆ ತಿಳಿಸೇನಲು | ಆಗ ನಾರದನು | ಪುರುಷನಿಲ್ಲದ ಬಳಿಕ ಸ್ತ್ರೀಯು ಗರ್ಭದರಿಸಿದ್ದು ನಾ ಕಂಡೆನಯ್ಯಾ | ಆಹಾ ದೇವಾ | ಬೀಜವಿಲ್ಲದ ಬಳಿಕ ವೃಕ್ಷ ಬೆಳೆದಿದ್ದು ನಾ ಕಂಡೆನಯ್ಯಾ | ಆಹಾ ದೇವಾ | ಹಾಲಿಲ್ಲದ ಬಳಿಕ ತುಪ್ಪವಾಗಿದ್ದು ನಾ ಕಂಡೆನಯ್ಯ | ಆಹಾ ದೇವಾ | ಗುರುಭಕ್ತಿ ಇಲ್ಲದ ಬಳಿಕ ಮುಕ್ತಿಯ ಪಡೆದಿದ್ದು ನಾ ಕಂಡೆನಯ್ಯಾ | ಅದು ಎಂತೆಂದೊಡೆ | ಪುರುಷನಿಲ್ಲದ ಬಳಿಕ ಸ್ತ್ರೀಯು ಗರ್ಭ ಧರಿಸಿದ್ದು ನಾ ಕಂಡೆನಯ್ಯಾ | ಅದು ಎಂತೆಂದೊಡೆ | ಶಿವಶರಣೆ ಅಕ್ಕನಾಗಮ್ಮಳು ಕಕ್ಕಯ್ಯನ ಮಿಕ್ಕ ಪ್ರಸಾದವಂ ಉಂಡು | ಚನ್ನಬಸವಣ್ಣನನ್ನು ಜನಿಸಿದ್ದು ನಾ ಕಂಡೆನಯ್ಯ | ಆಹಾ ದೇವಾ | ಬೀಜವಿಲ್ಲದ ಬಳಿಕ ವೃಕ್ಷ ಬೆಳೆದು ನಾ ಕಂಡೆನಯ್ಯಾ | ಅದು ಎಂತೆಂದೊಡೆ | ರೆಡ್ಡಿ ಹೇಮರೆಡ್ಡಿ ಮಲ್ಲಮ್ಮಳು | ಬಿತ್ತಲಿಕ್ಕೆ ಎಂದು ದವಸ ಧಾನ್ಯಗಳು ಒಯ್ಯುತ್ತಿರುವಾಗ | ದಾರಿಯಲ್ಲಿ ನಮ್ಮ ಚನ್ನಮಲ್ಲಿಕಾರ್ಜುನನು ಬಂದು ಭವತಿ ಭಿಕ್ಷಾಂದೇಹಿ ಎಂದು ಉಡಿ ಒಡ್ಡಿ ಬೇಡಲು | ಆಗ ರೆಡ್ಡಿ ಹೇಮರೆಡ್ಡಿ ಮಲ್ಲಮ್ಮಳು ನಮ್ಮ ಚೆನ್ನಮಲ್ಲಿಕಾರ್ಜುನನಿಗೆ ದವಸ ಧಾನ್ಯಗಳನ್ನು ನೀಡಿ | ಉಸುಗನ್ನು ಬಿತ್ತಿ ವೃಕ್ಷವನ್ನು ಬೆಳೆದಿದ್ದು ನಾ ಕಂಡೆನಯ್ಯಾ | ಆಹಾ ದೇವಾ | ಹಾಲಿಲ್ಲದ ಬಳಿಕ ತುಪ್ಪವಾಗಿದ್ದು ನಾ ಕಂಡೆನಯ್ಯ | ಅದು ಎಂತೆಂದೊಡೆ | ಹಲವು ಜೇನು ನೊಣಗಳು |

ಮರದಲ್ಲಿ ಕೂತು ತಟ್ಟೆಯನ್ನು ಇಟ್ಟು | ಹಾಲಿಲ್ಲವೇ ತುಪ್ಪವನ್ನು ಮಾಡಿದ್ದು ನಾ ಕಂಡೆನಯ್ಯಾ | ಆಹಾ ದೇವಾ | ಗುರುಭಕ್ತಿ ಇಲ್ಲದ ಬಳಿಕ ಮುಕ್ತಿ ಪಡೆದಿದ್ದು ನಾ ಕಂಡೆನಯ್ಯಾ | ಅದು ಎಂತೆಂದೊಡೆ ಶ್ವೇತನೆಂಬ ಅಸುರನು ಯಮನ ಬಾದೆಯನ್ನು ತಾಳಲಾರದೆ | ಗುರು ಭಕ್ತಿ ಇಲ್ಲದೆ ಶಿವನನ್ನು ಮೆಚ್ಚಿಸಿ | ಮುಕ್ತಿಯಂ ಪಡೆದಿದ್ದು ನಾ ಕಂಡೆನಯ್ಯಾ | ನಿನ್ನ ಪವಾಡವು ಅಂದಿಗುಂಟು ಇಂದಿಗಿಲ್ಲವೆಂಬ ಶತದ್ರೋಹಿಗಳಿಗೆ ನೀನೇ ಗಂಡ ಕಾರೇಕಲ್ಲು ಚೆನ್ನ ವೀರಭದ್ರದೇವ ಕಡೆ ಕಡೆ.....
</String>

< String name = " Sri veerabhadra vadapugalu 10 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ। ಹರಿಯ ಹತ್ತು ಭವದಲ್ಲಿ ಬರಿಸಿತ್ತು ಮಾಯೆ । ಬ್ರಹ್ಮನ ತಲೆಯ ಹೋಳು ಮಾಡಿತ್ತು ಮಾಯೆ । ಇಂದ್ರ ಚಂದ್ರರಂಗಕ್ಕೆ ಭಂಗವಿಕ್ಕಿತ್ತು ಮಾಯೆ। ಗರುಡ ಗಂಧರ್ವರ ಬರಡು ಮಾಡಿತ್ತು ಮಾಯೆ । ಕಿನ್ನರ ಕಿಂಪುರುಷರ ಚುನ್ನವಾಡಿತ್ತು ಮಾಯೆ । ಸಿದ್ಧಸಾಧಕರಿಗೆಲ್ಲ ಗುದ್ದಾಟವನಿಕ್ಕಿತ್ತು ಮಾಯೆ। ಮನುಮುನಿಗಳನೆಲ್ಲರ ಮನವ ಸೆಳಕೊಂಡು ಮರಣಕ್ಕೊಳಗೆ ಮಾಡಿತ್ತು ಮಾಯೆ । ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕದವರನ್ನೆಲ್ಲ ಯೋನಿಮುಖದಲ್ಲಿ ಹರಿಹರಿದು ನುಂಗಿ ತೊತ್ತಳದುಳಿದಿತ್ತು ಮಾಯೆ.ಮುಕ್ಕಣ್ಣಾ। ನೀ ಮಾಡಿದ ಮಾಯವ ಕಂಡು ಬೆಕ್ಕನೆ ಬೆರಗಾದೆನಯ್ಯ ಅಖಂಡೇಶ್ವರಾ ಕಡೆ ಕಡೆ..... </String>

< String name = " Sri veerabhadra vadapugalu 11 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ । ಹರನ ಉರಿಗಣ್ಣಿನಿಂದ ಹುಟ್ಟಿದನಯ್ಯಾ | ದುರುಳ ದಕ್ಷನ ಹೋಮ ಕುಂಡಕೆ ನಡೆದನಯ್ಯಾ | ವೀರಗರ್ಜನೆಯನ್ನು ಮಾಡಿ | ಎದುರಾದವರನ್ನು ಎಳೆದನಯ್ಯಾ ಖಡ್ಗವನ್ನು ಝಳಪಿಸಿ ದಕ್ಷನ ಶಿರ ಉರುಳಿಸಿದನಯ್ಯಾ | ಪಾದಕ್ಕೆ ಬಿದ್ದ ಪ್ರಸೂತಿಗೆ ಅಭಯವನ್ನಿತ್ತನಯ್ಯಾ | ಶಿಷ್ಟರ ರಕ್ಷಕ ದುಷ್ಟರ ಮರ್ದಕನೆಂದೆನಿಸಿದನಯ್ಯಾ | ಭದ್ರಕಾಳಿಯ ರಮಣ | ನೆಂದೆನಿಸಿದನಯ್ಯಾ | ಮೊರೆಹೊಕ್ಕ ಮಾರುತಿಗೆ ಲಿಂಗವನ್ನಿತ್ತನಯ್ಯಾ | ನಂಬಿದ ಭಕ್ತರಿಗೆ ಆರಾಧ್ಯ ದೇವನೆಂದೆನಿಸಿದನಯ್ಯಾ | ಇಂತಪ್ಪ ಶ್ರೀ ವೀರಭದ್ರ ದೇವರಿಗೆ ಶರಣು ಶರಣೆಂಬೆನಯ್ಯಾ ಕಡೆ ಕಡೆ... </String>

< String name = “ Sri veerabhadra vadapugalu 12 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಶ್ರೀ ವೀರಭದ್ರ ದೇವರು | ಹೋಮಕುಂಡದ ಬಳಿಗೆ ಹೇಗೆ ಬರುತ್ತಿದ್ದನೆಂದರೆ | ಕೆಂಜೆಡೆಯ ಉರಿಗಣ್ಣು ಕಿವಿಗೆ ಚವಕಳಿಯ ಮುತ್ತು | ಕೊರಳಲ್ಲಿ ಹಾಕಿದ ಪದಕದ ಹಾರ | ಕರಡಿಗೆಗೆ ಹಾಕಿದ ಶಿವದಾರ | ಕುತನಿಯ ಇಜಾರ | ಕುಂದಣದ ಉಡದಾರ | ಬಲಗೈಯಲ್ಲಿ ಬಂಗಾರದ ಬಳೆ | ಮುಂಗೈಗೆ ಮುರಿಕಂಕಣ ಕಟ್ಟಿಕೊಂಡು । ಅಕೋ ಆ ಕಡೆಯಿಂದ ಬಂದನಯ್ಯ | ಇಕೋ ಈ ಕಡೆಯಿಂದ ಬಂದನಯ್ಯ | ನಮ್ಮ ಬೆಟಗೇರಿ ಚೆನ್ನಿಗ ಚೆನ್ನ ವೀರಭದ್ರಾ.......
</String>

< String name = “ Sri veerabhadra vadapugalu 13 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ | ನಮ್ಮ ಶ್ರೀ ವೀರಭದ್ರ ದೇವನು ಯಜ್ಞಶಾಲೆಗೆ ಹೋಗುವಾಗ್ಗೆ | ಕರದಲ್ಲಿ ಧರಿಸಿದ ಆಯುಧಗಳಾವವೆಂದರೆ ಖಡ್ಗ, ತ್ರಿಶೂಲ | ಬಿಚ್ಚುಗತ್ತಿ ಬಿದರಗಿತ್ತಿ ಚಂದ್ರಬಾಣ ಸೂರ್ಯಬಾಣ ಅಗ್ನಿ ಬಾಣ | ಕಠಾರಿಗಳ ಪಿಡಿದು ಚಿರ್ರನೆ ಚೀರಿ ಖೋ ಎಂದು ಕೂಗಲು ಧರೆ ನಡುಗಿತಯ್ಯಾ | ಢಮರು ಶಂಖಗಳ ನಿನಾದವು | ಆಕಾಶ ಗಡಚಿಕ್ಕಿತಯ್ಯಾ | ಕಾಲೆಜ್ಜೆಗಳು ಢಣ್ ಢಣ್ ಎಂದು ಆದಿಶೇಷನ ಹೆಡೆಯು ಅದುರಿ | ರತ್ನ ಉದುರಿತಯ್ಯಾ | ಚುಕ್ಕೆಗಳು ಚದುರಿದವಯ್ಯಾ | ಚಂದ್ರಸೂರ್ಯರು ಪಲಾಯನ ಗೈದರಯ್ಯಾ | ದಿಗ್ಗಜಗಳು ಕುಸಿದುಬಿದ್ದವಯ್ಯಾ ಇಂತಪ್ಪ ರೌದ್ರಾವತಾರದಿಂದ ಹೊರಟಿದ್ದನಯ್ಯಾ | ನಮ್ಮ ಶ್ರೀ ವೀರಭದ್ರ | ಸಂಹಾರ ರುದ್ರ ಕಡೆ ಕಡೆ...... </String>

< String name = “ Sri veerabhadra vadapugalu 14 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಶರಭಾವತಾರಿಯಾದ ಶ್ರೀ ವೀರಭದ್ರನ ಶಕ್ತಿಯಂ ಪೇಳ್ವೆನು| ನರಸಿಂಹನೆಂಬಾತನು ಕಶ್ಯಪನ ಕೊಂದು ಅವನ ರಕ್ತ ಕುಡಿದು ಮದೋನ್ಮತ್ತನಾಗಿ | ಮೂಜಗ ಪಾಲಿಪ ದೇವತೆಗಳಿಗೆ ತ್ರಾಸು ಕೊಡಲು | ನಾಗಭೂಷಣನು ನಮ್ಮ ಶ್ರೀ ವೀರಭದ್ರನಿಗೆ ಅಪ್ಪಣೆ ಮಾಡಲು | ದಕ್ಷರಿಪುವು ಇಕ್ಷುಚಾಪನಿಗೆ ತಂದೆಯಾದ | ಕುಕ್ಷಿಯೊಳ್ ಬ್ರಹ್ಮನನ್ನು ಧರಿಸಿದ ಪಕ್ಷಿವಾಹನನೇ ಕೇಳು | ಮೋಕ್ಷದಾಯಕನಾದ ಜಗದ್ರಕ್ಷಕನು ನಿನಗೆ ಬುದ್ಧಿ ಹೇಳಿ ಕರೆತಾರೆಂದು

ಹೇಳಿರುವನು | ಬಂದರೆ ಒಳಿತು | ಇಲ್ಲವಾದರೆ ಶರಭಾವತಾರ ಧರಿಸಿ ನಿನ್ನನ್ನು ಕೊಂದು | ನಿನ್ನ ಚರ್ಮವಂ ಸುಲಿದು | ಶಂಕರಗೆ ಹಾಸಲಿಕ್ಕೆ ಕೊಡುವನೆಂದು ಹೇಳಿ | ನರಹರಿಯನು ಕೊಂದು ನಮ್ಮ ಶ್ರೀ ವೀರಭದ್ರ ವಿಕ್ರಮ ನಾಯಕ | ಛಲದಂಕಮಲ್ಲ ನಿನ್ನ ಪವಾಡ ಅಂದಿಗುಂಟು ಇಂದಿಗಿಲ್ಲವೆನ್ನುವ ದ್ರೋಹಿಗಳಿಗೆ ನೀನೆ ಗಂಡ ಕಡೆ ಕಡೆ...... </String>

< String name = " Sri veerabhadra vadapugalu 15 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ । ಶ್ರೀ ವೀರಭದ್ರದೇವರು ಘನವೆಂಬುದರ ಬಗ್ಗೆ ತಿಳಿಸುವೆನು ಕೇಳಿರಿ ಭಕ್ತಾದಿಗಳೇ । ಸಮುದ್ರವು ಘನವೆಂಬರು ಸಮುದ್ರವು ಘನವಲ್ಲ । ಸಮುದ್ರ ಅಗಸ್ಯ ಮುನಿಗೆ ಕುಡಿಯಲು ಸಾಲದಾಗಿ ಹೋಗಿತ್ತು । ಅಗ್ನಿ ಘನವೆಂಬರು ಅಗ್ನಿ ಘನವಲ್ಲ । ದಕ್ಷ ಯಜ್ಞದಲ್ಲಿ ವೀರೇಶನಿಂದ ಭುಜ ನಾಲಿಗೆಗಳನ್ನು ಕೊಯ್ಸಿಕೊಂಡು ಭಂಗಬಿಟ್ಟಿತ್ತು । ವಾಯು ಘನವೆಂಬರು: ವಾಯು ಘನವಲ್ಲ । ವಾತಭಕ್ಷಣ ಮುನಿಗೆ ನುಂಗಲು ಸಾಲದಾಗಿ ಹೋಗಿತ್ತು । ವಾತಭಕ್ಷಣ ಮುನಿಯು ಘನವೆಂಬರು! ವಾತಭಕ್ಷಣ ಮುನಿಯು ಘನವಲ್ಲ । ದಕ್ಷಯಜ್ಞದಲ್ಲಿ ವೀರೇಶನು ಅವನ ತೊಡೆಯನ್ನು ಮುರಿದನು । ಚಂದ್ರ ಘನವೆಂಬರು. ಚಂದ್ರ ಘನವಲ್ಲ । ಅವನು ದಕ್ಷನ ಶಾಪದಿಂದ ಕ್ಷಯರೋಗಿಯಾದ । ದಕ್ಷನು ಘನವೆಂಬರು, ದಕ್ಷನು ಘನವಲ್ಲ । ಶ್ರೀ ವೀರಭದ್ರನ ವೀರಭದ್ರನ ಹೊಡೆತಕ್ಕೆ ಅವನ ಚೆಂಡು ಕತ್ತರಿಸಿಬಿಟ್ಟನು | ಬೆಂಗಳೂರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಹಳೆನಿಜಗಲ್ಲು ಬೆಟ್ಟದ ಮೇಲಿರುವ ಉದ್ಧಾನ ವೀರಭದ್ರನೇ ನೀನೇ ಘನ ಕಡೆ ಕಡೆ ......
</String>

< String name = " Sri veerabhadra vadapugalu 16 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ನಮ್ಮ ರಾಚೋಟಿ ಶ್ರೀವೀರಭದ್ರ ದೇವರ ಪ್ರತಾಪವೆಂತೊಂದಡೆ | ಪಾತಾಳದಿಂ ಕೆಳಗೆ ಪಾದ | ಸತ್ಯಲೋಕದಿಂ ಮೇಲೆ ಉತ್ತಮಾಂಗ | ಬ್ರಹ್ಮಾಂಡವೇ ಮುಕುಟ | ಗಗನವೇ ಮುಖ | ಸೂರ್ಯಚಂದ್ರಾಗ್ನಿಗಳೇ ನೇತ್ರ | ದಶದಿಕ್ಕುಗಳೇ ಬಾಹುಗಳು | ಮಹದಾಕಾಶವೇ ಶರೀರ | ತರುಗಳೇ ತನೂರುಹ | ಶೂನ್ಯವೇ ಕರಸ್ಥಲದ ಲಿಂಗ | ನಕ್ಷತ್ರವೇ ಪುಷ್ಪ | ನಿತ್ಯವೇ ಪೂಜೆ | ಮೇಘವೇ ಜಡೆ | ಬೆಳ್ದಿಂಗಳೇ ವಿಭೂತಿ | ಪರ್ವತಂಗಳೇ ರುದ್ರಾಕ್ಷಿಗಳು | ಪಂಚಬ್ರಹ್ಮವೇ ಪಂಚಾಕ್ಷರ | ತತ್ವಂಗಳೇ ಜಪಮಾಲೆ | ಮೇರುವೇ ದಂಡಕೋಲು | ಸಮುದ್ರವೇ ಕಮಂಡಲು | ಶೇಷನೇ ಕಟಿಸೂತ್ರ | ಜಗವೇ ಕಂಥೆ | ಅನಂತವೇ ಕೌಪೀನ | ತ್ರಿಗುಣವೊಂದಾದುದೇ ಖರ್ಪರ | ಚತುರ್ಯುಗವೇ ಗಮನ | ಮಿಂಚೇ

ಅಂಗರುಚಿ | ಸಿಡಿಲೇ ಧ್ವನಿ | ವೇದಾಗಮವೇ ವಾಕ್ಯ | ಜ್ಞಾನಮುದ್ರೆಯೇ ಉಪದೇಶ | ಪೃಥ್ವಿಯೇ ಸಿಂಹಾಸನ | ದಿವಾರಾತ್ರಿಯೇ ಅರಮನೆ | ಶಿವಜ್ಞಾನವೇ ಐಶ್ವರ್ಯ | ನಿರಾಳವೇ ತೃಪ್ತಿ | ಇಂತಪ್ಪ ಚೈತನ್ಯಜಂಗಮಕ್ಕೆ ಆನು ನಮೋ ನಮೋ ಎನುತಿರ್ದೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ ಕಡೆ ಕಡೆ....... </String>

< String name = " Sri veerabhadra vadapugalu 17 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಮಹಾದೈಶ್ವರ್ಯ ಪದವು ಕೈಗೂಡಬೇಕಾದರೆ | ಶ್ರೀ ವಿಭೂತಿಯಿಂದಲೇ ಮತ್ತೆ ಬೇರೆಲ್ಲ ನೋಡಾ | ಸರ್ವಸಿದ್ಧಿಯು ದೊರಕುವುದು ಶ್ರೀ ವಿಭೂತಿಯಿಂದಲೇ ಮತ್ತೆ ಬೇರೆಲ್ಲ | ದಿನದಿನಕ್ಕೆ ಪಾಪ ಪರಿಹಾರವಾಗಬೇಕಾದರೆ ಶ್ರೀ ವಿಭೂತಿಯಿಂದಲೇ ಬೇರಿಲ್ಲ | ಅಂಗಕ್ಕೆ ವಿಭೂತಿಯಿಂದಲೇ ಮುಕ್ತಿ ಅದೆಂತೊಂದೆಡೆ |ಶ್ರೀ ಕರಂಚ | ಪವಿತ್ರಂಚ | ಆರಾಧ್ಯ | ಅಭಣಂತಧಾಮೋಕ್ಷ ವಶ್ಯಕರಂ | ಪುಣ್ಯ ಪಾಪನಾಶನಂ | ದಿನೇ ದಿನೇ | ಎಂಬುದಾಗಿ ಇಂತಪ್ಪ ಶ್ರೀ ವಿಭೂತಿಯ ಅಂತರಂಗದಲ್ಲಿ | ವಿಶ್ವಾಸವನ್ನಿಟ್ಟು ಧರಿಸಿ ಮನುಜರಿಗೆ | ಅನಂತ ಕೋಟಿ ಪಾತಕಂಗಳು ಪರಿಹಾರವಾಗಿ ಮುಂದೆ ಶಿವ ಸಾಯುಜ್ಯ ಪದವಿಯು | ದೊರಕೊಂಬುವುದು ದೇವಾ ಕರೆ ಕಾಳಿಂಗ ರುದ್ರ | ಕರ ವೀರಭದ್ರ ಕಡೆ ಕಡೆ..... </String>

< String name = " Sri veerabhadra vadapugalu 18 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಅಹಾ ವೀರಾ । ಯಾವ ಜಾತಿಯಲ್ಲಿ ಹುಟ್ಟಿದ ಮನುಜನೇ ಆಗಲಿ | ಲಿಂಗಧರಿಸಿದವನೇ ಶ್ರೇಷ್ಠನು ! ಮಹಾದೇವನ ನೆನೆಯುವಂಥವನೇ ಶ್ರೇಷ್ಠನು | ಕಣ್ಣಿನಿಂದ ನೋಡುವವನು ಇವನಿಗಿಂತ ಅಧಿಕನು | ಕೈಯಿಂದ ಮುಟ್ಟಿ ಪೂಜಿಸುವವನು ಎಲ್ಲರಿಗಿಂತ ಶ್ರೇಷ್ಠನು | ಶಿವಲಿಂಗ ಮೂರ್ತಿಗೆ ನಮಸ್ಕರಿಸುವದು ಮಹಾಪುಣ್ಯಕರವು । ಶಿವಲಿಂಗವ ಮುಟ್ಟಿ ಪೂಜಿಸಲು ಸರ್ವಪಾಪಗಳೂ ನಾಶವಾಗುವವೆಂದು | ಶಿವಧರ್ಮದಲ್ಲಿ ಹೇಳಿದೆಯಾದ್ದರಿಂದ । ಇಂಥ ಪುಣ್ಯಕರವಾದ ಲಿಂಗವನ್ನು ಅಂಗದ ಮೇಲೆ ಧರಿಸಿಕೊಂಡಿರುವವನು | ಸರ್ವರಿಗಿಂತಲೂ ಶ್ರೇಷ್ಠನಾಗುವನು ದೇವಾ | ಭದ್ರಕಾಳಿಯ ರಮಣ ಕಡೆ ಕಡೆ ......</String>

< String name = “ Sri veerabhadra vadapugalu 19 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ । ಕೋಣದ ಕೊಂಬಿನ ಮೇಲೆ ಕಠೋರವೆಂಬ ಪಟ್ಟಣ ಹುಟ್ಟಿತ್ತು । ಆ ಪಟ್ಟಣದಲ್ಲಿ ಹಾಯ್ ಹಾಯ್ ಎಂಬ ಗೌಡ । ಹೊಯ್ ಹೊಯ್ ಎಂಬ ಕುಲಕರಣಿ | ಮೈಯ್ ಮೈಯ್ ಎಂಬ ತಳವಾರ | ಆ ತಳವಾರನ ಹೆಂಡತಿಯು ತಳವಿಲ್ಲದ ಕೊಡವನ್ನು ಹೊತ್ತುಕೊಂಡು ಜಲವಿಲ್ಲದ ಬಾವಿಗೆ ನೀರಿಗೆ ಹೋದಳು | ಆ ಬಾವಿಯ ದಡದ ಮೇಲೆ ಬೇರಿಲ್ಲದ ಬೇವಿನಮರ ಹುಟ್ಟಿತ್ತು ಆ ಮರದ ಮೇಲೆ ಪುಕ್ಕವಿಲ್ಲದ ಪಕ್ಷಿ ಕೂತಿತ್ತು ಅದನ್ನು ಕಣ್ಣಿಲ್ಲದವನು ನೋಡಿ ಕೈಯಿಲ್ಲದವನ ಮುಂದೆ ಹೇಳಲು | ಕೈಯಿಲ್ಲದವನು ತುದಿಯಿಲ್ಲದ ಬಾಣವನ್ನು ಹೊಡೆಯಲು | ಆ ಪಕ್ಷಿಗೆ ಬಿತ್ತೋ ಬೀಳಲಿಲ್ಲೋ ಎಂದಾತ ನಮ್ಮ ಅಂಬಿಗರ ಚೌಡಯ್ಯ ಕಡೆ ಕಡೆ..... </String>

< String name = “ Sri veerabhadra vadapugalu 20 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರ । ಆಹಾ ವೀರಾ । ಶ್ರೀವಿಭೂತಿಯ ಮಹತ್ವಂ ಪೇಳುವೆನು । ಅದೇನೆಂದರೆ ಯಾವ ಕಾರ್ಯಕ್ಕಾದರೂ ಶ್ರೀವಿಭೂತಿಯೇ ಬೇಕು । ಅವಕ್ರಿಯೆಗಾದರೂ ಶ್ರೀವಿಭೂತಿಯೇ ಬೇಕು । ಹೀನ ಜಾತಿಯಲ್ಲಿ ಹುಟ್ಟಿದವನು । ಶಿವನ ಧ್ಯಾನಿಸಿ ನೊಸಲೊಳು ಶ್ರೀವಿಭೂತಿ ಧರಿಸಲು । ಆತನು ಶ್ರೇಷ್ಠನೇ ಆಗುವನು । ಆತನ ಕುಲ ಜಾತಿಗಳ ಎಣಿಸಬಾರದು । ಆತನ ವಿದ್ಯೆಗಳ ಕೇಳಬಾರದು । ಅವನೊಬ್ಬ ಶ್ರೀವಿಭೂತಿಯ ಧರಿಸದೆ ವೇದವನೋದಿದರೇನು । ಆತನು ಓದಿದ ವೇದಗಳು ವ್ಯರ್ಥವಾಗುವವು । ಅವನೊಬ್ಬ ಶ್ರೀವಿಭೂತಿಯ ಧರಿಸದೆ ಯಜ್ಞಂಗಳು ಮಾಡಿದರೇನು । ಅವನು ಮಾಡಿದ ಯಜ್ಞಂಗಳು ವ್ಯರ್ಥವಾಗುವವು । ಅವನೊಬ್ಬ ಶ್ರೀವಿಭೂತಿಯ ಧರಿಸದೆ ದಾನ ಮಾಡಿದರೇನು ಜಪ ತಪಗಳು ಮಾಡಿದರೇನು । ಅವನು ಮಾಡಿದ ದಾನ ಜಪ ತಪಗಳು ವ್ಯರ್ಥವಾಗುವವು । ಅವನೊಬ್ಬ ಶ್ರೀವಿಭೂತಿ ಧರಿಸದೆ ನಿತ್ಯನೇಮ ವ್ರತಾದಿಗಳು ಮಾಡಿದರೇನು । ಅವನ ವ್ರತ ನಿಯಮಗಳು ವ್ಯರ್ಥವಾಗುವವು । ಇಂತಪ್ಪ ಶ್ರೀವಿಭೂತಿಯಲ್ಲಿ ಐಶ್ವರ್ಯವಿದೆ ಪ್ರಾಣವಿದೆ । ಸಕಲ ಇಷ್ಟಾರ್ಥಗಳು ಸಿದ್ಧಿಯಿದೆ । ಸಕಲಕ್ಕೂ ಶ್ರೀವಿಭೂತಿಯೇ ಆಧಾರವಯ್ಯ । ಗದಗ-ಶಹಪುರ ಪೇಟೆ ವೀರಭದ್ರ । ಕರುಣಾ ಸಮುದ್ರ । ಭದ್ರಕಾಳಿಯ ರಮಣ ಕಡೆ ಕಡೆ.....</String>

< String name = “ Sri veerabhadra vadapugalu 21 “ >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಬ್ರಹ್ಮಂಗೆ ಬ್ರಹ್ಮಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ವಿಷ್ಣುವಿಂಗೆ ವಿಷ್ಣುಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ದೇವತೆಗಳಿಗೆ ದೇವಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿ ಸ್ನಾನವ ಮಾಡಿದ ಋಷಿಗಳಿಗೆ ಋಷಿಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಗಂಧರ್ವರುಗಳಿಗೆ ಗಂಧರ್ವಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ರುದ್ರಗಣರಿಗೆ ರುದ್ರಗಣಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಯಕ್ಷರಿಗೆ ಯಕ್ಷಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಕಿನ್ನರರಿಗೆ ಕಿನ್ನರಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಅಮರಗಣರಿಗೆ ಅಮರಗಣಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಪಿತೃಗಣರಿಗೆ ಪಿತೃಗಣಪದವಾಯಿತ್ತು । ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಭೂತಗಣರಿಗೆ ಭೂತಗಣಪದವಾಯಿತ್ತು । ಅದೆಂತೆಂದೊಡೆ । "ಬ್ರಹ್ಮವಿಷ್ಣ್ವಾದಿದೇವಾ ಋಷಯೋ ಗಂಧರ್ವಾ ಯಕ್ಷಕಿನ್ನರಾಃ ।ಮರುದ್ಗಣಾಃ ಪಿತೃಗಣಾಃ ಸರ್ವೇ ಭೂತಗಣಾ ಅಪಿ । ನಿತ್ಯಂ ಚ ಸರ್ವಯತ್ನೇನ ಭಸ್ಮಸ್ನಾನಂ ಪ್ರವರ್ತತೇ ।"ಎಂದುದಾಗಿ । ಇಂತಪ್ಪ ಶ್ರೀ ವಿಭೂತಿಯ ಮಹತ್ವವ ಕಂಡು ಕೇಳಿ ನಂಬಲರಿಯದೆ ಗರ್ವದಿಂದೆ ಮುಂದುಗೆಟ್ಟ ಮರುಳಮಾನವರಿಗೆ ಭವರಾಟಾಳದಲ್ಲಿ ಸತ್ತು ಸತ್ತು ಹುಟ್ಟಿ ಹುಟ್ಟಿ ಬಪ್ಪುದುತಪ್ಪದು ನೋಡಾ ಅಖಂಡೇಶ್ವರಾ ಕಡೆ ಕಡೆ... </String>

< String name = " Sri veerabhadra vadapugalu 22 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಶ್ರೀಗುರುವಿನ ಕರಗರ್ಭದಲ್ಲಿ ಉದಯವಾದ ಶರಣಸತಿ ನಾನು | ಶ್ರೀಗುರುವಿನ ಹೃದಯಗರ್ಭದಲ್ಲಿ ಉದಯವಾದ ಲಿಂಗಪತಿಗೆ ಎನ್ನ ಮದುವೆಯ ಮಾಡುವ ಕಾಲದಲ್ಲಿ | ಸಹಸ್ರದಳ ಕಮಲವೆಂಬ ಸಾವಿರಕಂಬದ ಮಂಟಪವ ರಚಿಸಿ | ಆ ಮಂಟಪದ ಮಧ್ಯದಲ್ಲಿ ಪಂಚಪಾತ್ರವೆಂಬ ಪಂಚಮುದ್ರೆಯ ರಂಗವಲ್ಲಿಯ ತುಂಬಿ | ಆ ಪಂಚಮುದ್ರೆಯಲ್ಲಿ ಪಂಚಪ್ರಣವೆಂಬ ಪಂಚಕಲಶವ ಹೂಡಿ | ಆ ಪಂಚಕಲಶಂಗಳಿಗೆ ಸ್ವಾನುಭಾವಜ್ಞಾನವೆಂಬ ಸುರಗಿಯ ಸುತ್ತಿ | ಆ ಮಧ್ಯದಲ್ಲಿ ಎನಗೆ ಶೃಂಗಾರವ ಮಾಡಿದರೆಂತೆನಲು | ಸರ್ವಾಚಾರ ಸಂಪತ್ತೆಂಬ ಸೀರೆಯನುಡಿಸಿ | ಸುಜ್ಞಾನವೆಂಬ ಕುಪ್ಪಸವ ತೊಡಿಸಿ | ಸದ್ಭಕ್ತಿಯೆಂಬ ಬಳೆಯನಿಡಿಸಿ | ಏಕಭಾವದ ನಿಷ್ಠೆಯೆಂಬ ತಾಳಿಯ ಕಟ್ಟಿ | ನಿಜಮುಕ್ತಿಯೆಂಬ ಮೂಗುತಿಯನಿಟ್ಟು ಶಿವಮಂತ್ರವೆಂಬ ಕರ್ಣಾಭರಣವ ಧರಿಸಿ | ಸತ್ಕ್ರಿಯೆಯೆಂಬ ಪಾದಾಭರಣವ ಧರಿಸಿ | ಪರಮೇಶ್ವರನ ಚಿತ್ಪ್ರಕಾಶವೆಂಬ ಚಿದ್ವಿಭೂತಿಯನೆ ತಂದು | ಎನ್ನ ಲಲಾಟದಲ್ಲಿ ಪಟ್ಟವ ಕಟ್ಟಿ | ಸತಿಸಂಗವಗಲಬೇಡವೆಂದು ಎನ್ನ ಪತಿಯ ಸೆರಗ ತಂದು ಎನ್ನ ಸೆರಗಿಗೆ ಕೂಡಿಸಿ | ಷಟ್ಸ್ಥಲ ಬ್ರಹ್ಮಗಂಟನಿಕ್ಕಿ | ಪತಿಭಕ್ತಿಯಗಲದಿರೆಂದು ಎನ್ನ ಮುಂಗೈಯಲ್ಲಿ ಸಕಲಗಣಂಗಳ ಸಾಕ್ಷಿಯಾಗಿ ಬಿರುದಿನ ವೀರಕಂಕಣವ ಕಟ್ಟಿ | ಜಂಗಮದ

ಪಾದತೀರ್ಥ ಪ್ರಸಾದವೆಂಬ ಭೂಮವನುಣಿಸಿ | ಮದುವೆಯ ಮಾಡಿದರಂದು | ಇಂದು ಎನಗೆ ಯೌವನವಾಯಿತ್ತು |ಏಳುನೆಲೆಯ ಮೇಲುಪ್ಪರಿಗೆಯ ಮೇಲೆ ಲೀಲೆಯಿಂದ ಕೂಡಿ ಸುಖಿಸಯ್ಯಾ ಎನ್ನ ಅಖಂಡೇಶ್ವರಾ...... </String>

< String name = " Sri veerabhadra vadapugalu 23 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ತ್ರೈಲೋಕ್ಯ ಸಂಪದಾಲೇಖ್ಯ ಸಮಲ್ಲೇಖನಭಿತ್ತಯೇ | ಸಚ್ಚಿದಾನಂದ ರೂಪಾಯ ಶಿವಾಯ ಪರಬ್ರಹ್ಮಣೇ ನಮಃ | ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ | ಜಗತ್ ಪಿತರೌ ವಂದೇ ಪಾರ್ವತಿ ಪರಮೇಶ್ವರೌ | ವೀರಶೈವ ಧರ್ಮದ ಸಿದ್ಧಾಂತಗಳಾದ ಅಷ್ಟಾವರಣ ಪಂಚಾಚಾರ ಷಟ್ ಸ್ಥಳಗಳು | ಇವುಗಳಲ್ಲಿ ಅಷ್ಟಾವರಣದಲ್ಲಿನ ವಿಭೂತಿಯು ಒಂದು | ವಿಭೂತಿಯ ಮಹಿಮೆಯನ್ನು ವಿಸ್ತರಿಸುತ್ತೇವೆ | ಲಕ್ಷ್ಯ ವಿಟ್ಟು ಕೇಳುವಂತವರಾಗಿರಿ | ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ್ಯ ಇವು ಪರಶಿವನ ಪಂಚಮುಖಗಳು | ಪರಶಿವನ ಪೂರ್ವದಿಕ್ಕಿನ ಸದ್ಯೋಜಾತ ಮುಖದಿಂದ ನಂದಾ ಎಂಬ ನಸುಗೆಂಪು ಬಣ್ಣದ ಗೋವು ಹುಟ್ಟಿತು | ಈ ಗೋವಿನ ಗೋಮಯದಿಂದ ವಿಭೂತಿಯು ಉತ್ಪನ್ನವಾಯಿತು | ಪರಶಿವನ ದಕ್ಷಿಣ ದಿಕ್ಕಿನ ವಾಮದೇವ ಮುಖದಿಂದ ಭದ್ರಾ ಎಂಬ ಕೃಷ್ಣವರ್ಣದ ಗೋವು ಹುಟ್ಟಿತು | ಈ ಗೋವಿನ ಗೋಮಯದಿಂದ ಭಸಿತ ಉತ್ಪನ್ನವಾಯಿತು | ಪರಶಿವನ ಪಶ್ಚಿಮ ದಿಕ್ಕಿನ ಅಘೋರ ಮುಖದಿಂದ ಸುರಭಿ ಎಂಬ ರಕ್ತವರ್ಣದ ಗೋವು ಹುಟ್ಟಿತು | ಈ ಗೋವಿನ ಗೋಮಯದಿಂದ ಭಸ್ಮ ಉತ್ಪನ್ನವಾಯಿತು | ಪರಶಿವನ ಉತ್ತರ ದಿಕ್ಕಿನ ತತ್ಪುರುಷ ಮುಖದಿಂದ ಸುಶೀಲಾ ಎಂಬ ಶ್ವೇತವರ್ಣದ ಗೋವು ಹುಟ್ಟಿತು | ಈ ಗೋವಿನ ಗೋಮಯದಿಂದ ಕ್ಷಾರ ಉತ್ಪನ್ನವಾಯಿತು | ಪರಶಿವನ ಊರ್ಧ್ವದಿಕ್ಕಿನ ಈಶಾನ ಮುಖದಿಂದ ಸುಮನಾ ಎಂಬ ಚಿತ್ರವರ್ಣದ ಗೋವು ಹುಟ್ಟಿತು | ಈ ಗೋವಿನ ಗೋಮಯದಿಂದ ರಕ್ಷೆ ಉತ್ಪನ್ನವಾಯಿತು | ವಿಭೂತಿ, ಭಸಿತ, ಭಸ್ಮ, ಕ್ಷಾರ, ರಕ್ಷೆ ಎಂಬ ನಾಮದ ಭಸ್ಮಗಳನ್ನು ಧರಿಸುವುದರಿಂದ ನಮ್ಮ ಸರ್ವ ಪಾಪಗಳು ಪರಿಹಾರವಾಗುತ್ತವೆ | ಸಕಲ ಇಷ್ಟಾರ್ಥಗಳು ಸಿದ್ಧಿಸುತ್ತವೆ | ಸರ್ವರೋಗ ಪರಿಹಾರವಾಗುತ್ತದೆ | ಪರಶಿವನ ಕರುಣೆ ಉಂಟಾಗುತ್ತದೆ | ಭಸ್ಮ ಪ್ರಿಯ ಶ್ರೀ ವೀರಭದ್ರೇಶ್ವರ ಸ್ವಾಮಿಯ ಕೃಪಾಕಟಾಕ್ಷ ದೊರೆಯುವುದು ನೋಡಾ ಕಡೆ ಕಡೆ........ </String>

< String name = " Sri veerabhadra vadapugalu 24 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ । ನಾವು ಶೀಲವಂತರು ನಾವು ಶಿವಭಕ್ತರು | ನಾವು ಶಿವಶರಣರು ಎಂದು ಹೇಳಿಕೊಳ್ಳುವ ಭಂಡರಿಗೆ ಏನು ಹೇಳಬೇಕು? ಬರೇ ಶೀಲವಂತರೆಂದು ಹೇಳಿಕೊಂಡರೆ ಶೀಲವಂತನಾಗಲಿಲ್ಲ । ಶಿವಭಕ್ತನೆಂದುಕೊಂಡರೆ

ಶಿವಭಕ್ತನಾಗಲಿಲ್ಲ | ಗುರುಭಕ್ತಿಯಿಂದ ತನುಶುದ್ಧವಾಗಲಿಲ್ಲ | ಸುಳ್ಳು ಸಂಸಾರದ ಜೊಂಜಾಟದಲ್ಲಿ ಸಿಕ್ಕು | ಮೋಸದ ವ್ಯಾಪಾರ ಮಾಡುತ್ತ ನಾವು ಸತ್ಯವಂತರು ನಾವು ಶೀಲವಂತರು । ಎಂದು ಹೇಳಿಕೊಳ್ಳುವ ಮಂಗ ಮನುಜರ ಪದ್ಧತಿ ಹೇಗಾಯಿತೆಂದರೆ । ಹೆಂಡದ ಗಡಿಗೆಗೆ ವಿಭೂತಿಪಟ್ಟವ ಬಡಿದಂತಾಯಿತು ನೋಡಾ ಭದ್ರಕಾಳಿಯ ರಮಣ । ಗದಗ ಶಹಪೂರಪೇಟೆ ವೀರಭದ್ರ | ಕಡೆ ಕಡೆ .... </String>

< String name = " Sri veerabhadra vadapugalu 25 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಗಂಡುಗಲಿ ಶ್ರೀವೀರಭದ್ರ ದೇವರನ್ನು ಮನೆಯ ಜಗುಲಿಯ ಮೇಲಿಟ್ಟು ಪೂಜಿಸುವ ಭಕ್ತರೆಲ್ಲ ನೀವು ಕೇಳಿರಯ್ಯ | ಆಹಾ ದೇವಾ | ಜಗತ್ತಿಗೆ ಒಬ್ಬನೇ ದೇವರು | ಸಾವಿರಾರು ದೇವರನ್ನು ಪೂಜೆ ಮಾಡಿದರೆ | ಗಂಡ ಬಿಟ್ಟ ರೆಂಡೆಯಂತಾಗುವರಯ್ಯ | ಸಕಲ ದೇವರ ದೇವನಾದ ಶಂಕರನು ನಮ್ಮ ಶ್ರೀ ವೀರಭದ್ರ ದೇವರ ಜನಕನಾಗಿರಲು | ಶಿವನೇ ಸರ್ವ ಅಧಿಕನೆಂದು ತಿಳಿಯಬೇಕಯ್ಯ | ಮೂರು ಲೋಕಗಳಿಗೆ ಮುಕ್ಕಣ್ಣನೇ ಅಧಿಕ | ಭಕ್ತರಲ್ಲಿ ಬಸವಣ್ಣನೇ ಅಧಿಕ | ಲಿಂಗಗಳಲ್ಲಿ ಗುರು ಕೊಟ್ಟ ಲಿಂಗವೇ ಅಧಿಕ | ಹೂಗಳಲ್ಲಿ ಮಲ್ಲಿಗೆ ಹೂವೆ ಅಧಿಕ | ಪತ್ರಿಗಳಲ್ಲಿ ಬಿಲ್ವಪತ್ರೆಯೇ ಅಧಿಕ | ಬಣ್ಣಗಳಲ್ಲಿ ಬಿಳಿಬಣ್ಣವೇ ಅಧಿಕ | ಹೆಣ್ಣುಗಳಲ್ಲಿ ಪತಿವ್ರತೆಯೇ ಅಧಿಕ | ಹಣ್ಣುಗಳಲ್ಲಿ ಮಾವಿನ ಹಣ್ಣೆ ಅಧಿಕ | ರಾತ್ರಿಗಳಲ್ಲಿ ಶಿವರಾತ್ರಿಯೇ ಅಧಿಕ | ಕ್ಷೇತ್ರಗಳಲ್ಲಿ ಕಾಶಿ ಕ್ಷೇತ್ರವೇ ಅಧಿಕ | ಮಾನವರಲ್ಲಿ ಜ್ಞಾನಿಯೇ ಅಧಿಕ । ಮಾತಿನಲ್ಲಿ ಮೃದುನುಡಿಯೇ ಅಧಿಕ | ಸರ್ವಗುಣಗಳಲ್ಲಿ ಶಾಂತಿಯೇ ಅಧಿಕ | ಸರ್ವ ದೇವತೆಗಳಲ್ಲಿ ನಮ್ಮ ಶಿವನೇ ಅಧಿಕ | ಈ ನಮ್ಮ ಶಿವನ ಉರಿನೇತ್ರದಿಂದ ಅವತರಿಸಿದ ನಮ್ಮ ಕಲಿ ವೀರಭದ್ರಾ | ಕರುಣಾ ಸಮುದ್ರ | ನಿನ್ನ ಪವಾಡವು ಅಂದಿಗುಂಟು ಇಂದಿಗಿಲ್ಲವೆಂಬ ಶತದ್ರೋಹಿಗಳಿಗೆ ನೀನೇ ಪ್ರಚಂಡ ಕಡೆಕಡೆ.... </String>

< String name = " Sri veerabhadra vadapugalu 26" >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರ | ಆಹಾ ವೀರಾ । ಹಸ್ತಪೀಠದ ಮೇಲೆ ಇಷ್ಟಲಿಂಗವನ್ನು ಸ್ಥಾಪಿಸಿ ಪೂಜಿಸುವುದರಿಂದ ಹಸ್ತಂಗಳು ಪಾವನವಯ್ಯ | ಲಿಂಗವನ್ನು ತದೇಕ ದೃಷ್ಟಿಯಿಂದ ನೋಡುವುದರಿಂದ ಚಕ್ಷುಗಳು ಧನ್ಯವಾದವಯ್ಯಾ ಲಿಂಗಪೂಜೆಯ ಸ್ತೋತ್ರ, ಮಂತ್ರಗಳನ್ನು ಕೇಳಿದ ಕಿವಿಗಳು ಪವಿತ್ರವಾದವಯ್ಯ | ಲಿಂಗಪೂಜೆಯ ಪವಿತ್ರ ಜಲವನ್ನು ಸೇವಿಸಿದ ಬಾಯಿ ಸಾರ್ಥಕವಾಯಿತಯ್ಯ | ಲಿಂಗಪೂಜೆಯ ನಂತರದ ಪತ್ರೆ, ಪುಷ್ಪಗಳನ್ನು ಮೂಸಿದ ನಾಸಿಕವು ಪಾವನವಾಯಿತಯ್ಯ

ಲಿಂಗವನ್ನು ದೇಹದ ಮೇಲೆ ಧರಿಸಿದಾಗ ಸರ್ವಾಂಗಗಳು ಪಾವನವಾದವಯ್ಯ ಲಿಂಗ ಸಂಬಂಧದಿಂದ ಭೂಮಿ, ಜಲ, ತೇಜ, ವಾಯು ಮತ್ತು ಆಕಾಶಗಳು ಪಾವನವಾದವಯ್ಯ ಆಹಾ ದೇವಾ ಸೋಮನಾಥ ಲಿಂಗದಿಂದ ಸೌರಾಷ್ಟ್ರ ಪಾವನ ಕ್ಷೇತ್ರವಾಯಿತಯ್ಯ | ಮಲ್ಲಿಕಾರ್ಜುನ ಲಿಂಗದಿಂದ ಶ್ರೀಶೈಲ ಪುಣ್ಯಕ್ಷೇತ್ರವಾಯಿತಯ್ಯ ಮಹಾಕಾಲ ಲಿಂಗದಿಂದ ಉಜ್ಜಯಿನಿ ಪಾವನ ಕ್ಷೇತ್ರವಾಯಿತಯ್ಯ | ಓಂಕಾರೇಶ್ವರ ಲಿಂಗದಿಂದ ಅಮರೇಶ್ವರ ಪುಣ್ಯಕ್ಷೇತ್ರವಾಯಿತಯ್ಯ ವೈದ್ಯನಾಥ ಲಿಂಗದಿಂದ ಪರಳಿ ಪಾವನ ಕ್ಷೇತ್ರವಾಯಿತಯ್ಯ ಭೀಮಶಂಕರ ಲಿಂಗದಿಂದ ಡಾಕಿನಿ ಪುಣ್ಯಕ್ಷೇತ್ರವಾಯಿತಯ್ಯ | ರಾಮೇಶ್ವರ ಲಿಂಗದಿಂದ ಸೇತುಬಂಧ ಪುಣ್ಯಕ್ಷೇತ್ರವಾಯಿತಯ್ಯ | ನಾಗೇಶ್ವರ ಲಿಂಗದಿಂದ ದಾರುಕವನ ಪಾವನ ಕ್ಷೇತ್ರವಾಯಿತಯ್ಯ | ವಿಶ್ವೇಶ್ವರ ಲಿಂಗದಿಂದ ವಾರಣಾಸಿಯು ಪಾವನ ಕ್ಷೇತ್ರವಾಯಿತಯ್ಯ ತ್ರಯಂಬಕ ಲಿಂಗದಿಂದ ಗೌತಮಿ ತಟ ಪುಣ್ಯಕ್ಷೇತ್ರವಾಯಿತಯ್ಯ ಕೇದಾರಲಿಂಗದಿಂದ ಹಿಮಾಲಯ ಪಾವನ ಕ್ಷೇತ್ರವಾಯಿತಯ್ಯ | ಘೃಷ್ಣೇಶ್ವರ ಲಿಂಗದಿಂದ ಶಿವಾಲಯ ಪುಣ್ಯಕ್ಷೇತ್ರವಾತಯ್ಯ | ಆಹಾ ದೇವಾ | ಅಮರನಾಥ ಲಿಂಗದಿಂದ ಕಾಶ್ಮೀರ । ಪೃಥ್ವಿ ಲಿಂಗದಿಂದ ಶಿವ ಕಂಚಿ । ತೇಜೋ ಲಿಂಗದಿಂದ ಅರುಣಾಚಲ । ವಾಯು ಲಿಂಗದಿಂದ ಕಾಳಹಸ್ತಿ । ಆಕಾಶ ಲಿಂಗದಿಂದ ಚಿದಂಬರ ಕ್ಷೇತ್ರಗಳು ಪುಣ್ಯಕ್ಷೇತ್ರವಾದವಯ್ಯ । ವಿರೂಪಾಕ್ಷ ಲಿಂಗದಿಂದ ಹಂಪಿ । ಮಂಜುನಾಥ ಲಿಂಗದಿಂದ ಧರ್ಮಸ್ಥಳ । ತಾರಕೇಶ್ವರ, ಗೆಜ್ಜೇಶ್ವರ, ಧಾರೇಶ್ವರ, ಗುಣವಂತೇಶ್ವರ ಮತ್ತು ಮಹಾಬಲೇಶ್ವರ ನಾಮದ ಲಿಂಗಗಳಿಂದ ಗೋಕರ್ಣ ಪಾವನ ಕ್ಷೇತ್ರವಾಯಿತಯ್ಯ | ದೊಡ್ಡಬಸವೇಶ್ವರ ಮೂರ್ತಿಯಿಂದ ಕುರುಗೋಡು ಪುಣ್ಯಕ್ಷೇತ್ರವಾಯಿತಯ್ಯ । ಈಶ್ವರ, ವೀರಭದ್ರಸ್ವಾಮಿ, ಮಟ್ಟಿ ವೀರಭದ್ರಸ್ವಾಮಿ, ರಾಮಲಿಂಗೇಶ್ವರ ಸ್ವಾಮಿ ಇವರ ಕರುಣೆಯಿಂದ ಕಾರೇಕಲ್ಲು ಪುಣ್ಯಕ್ಷೇತ್ರವಾಯಿತಯ್ಯ | ಇಂತಪ್ಪ ಲಿಂಗಗಳ ಸ್ಮರಿಸಿ, ಭಜಿಸಿ, ಧ್ಯಾನಿಸಿದೊಡೆ ನಮ್ಮ ಜನ್ಮ ಪಾವನವಾಗುವದಯ್ಯ ಕಡೆ ಕಡೆ......

< String name = " Sri veerabhadra vadapugalu 27 " >ಶ್ರೀವೀರಭದ್ರೇಶ್ವರ ವಡಪು\n\n

ಅಹಹಾ ರುದ್ರಾ | ಮನವೆಂಬ ಮರ್ಕಟವು ತನುವೆಂಬ ವೃಕ್ಷವನ್ನೇರಿ | ಇಂದ್ರಿಯಗಳೆಂಬ ಶಾಖೆಶಾಖೆಗೆ ಹಾರಿ ವಿಷಯವೆಂಬ ಹಣ್ಣು ಫಲಗಳ ಗ್ರಹಿಸಿ | ಭವದತ್ತ ಮುಖವಾಗಿ ಹೋಗುತ್ತಿದೆ ನೋಡು ದೇವಾ | ಈ ಮನವೆಂಬ ಮರ್ಕಟವನ್ನು । ನಿಮ್ಮ ನೆನೆಹೆಂಬ ಹಗ್ಗದಿಂದ ಕಟ್ಟಿ । ಎನ್ನ ಉಳುಹಿಕೊಳ್ಳಯ್ಯಾ ದೇವಾ | ಈ ಕಳ್ಳಮನಕ್ಕೆ ಏನು ಮಾಡಲಿ | ಶಿವ ಶಿವಾ | ಕೃಪಾವಲೋಕನದಿಂದ ಸಲುಹಯ್ಯಾ ದೇವಾ । ಎನ್ನ ಧರ್ಮವೇ ನಿಮ್ಮ ಧರ್ಮವಯ್ಯ | ಸತ್ಯವ ನುಡಿಯುವದು ಸದಾಚಾರದಲ್ಲಿ ನಡೆಯುವದು || ಭಕ್ತಿಯ | ನಿಮ್ಮ ಭಕ್ತಿ ಭಾವದಲ್ಲಿರಿಸಿ | ಸರ್ಪನ ಬಾಯಲ್ಲಿ ಸಿಕ್ಕ ಕಪ್ಪೆಯಂತೆ | ಸಕಲ

ಲೋಕಂಗಳು | ಮಾಯಾ ಒಲೆಯಲ್ಲಿ ಸಿಕ್ಕಿ । ಸೆರೆ ಹೋಗುವದು ಕಂಡೆ । ನಾನು ಅಂಜಿ ನಿಮ್ಮ ಮೊರೆಯ ಹೊಕ್ಕೆನು ದೇವಾ ಭದ್ರಕಾಳಿಯ ರಮಣ ಕಡೆ ಕಡೆ .... </String>

< String name = " Sri veerabhadra vadapugalu 28 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಶಿವನಾಮ ಸ್ಮರಣೆಯ ಫಲದಿಂದ ಭವದ ಬೇರು ಕಿತ್ತು ಹೋಗುವುದು । ಆದ್ದರಿಂದ ಶಿವಾ ಶಿವಾ ಎಂದು ಕಾಲಹರಣ ಮಾಡಿರೋ ಈ ಜೀವನದಲ್ಲಿ । ಆ ಪರಶಿವ ಮೂರ್ತಿ ಲಿಂಗವನ್ನು ಪೂಜಿಸಿ ಹರಿಯು ಹತ್ತು ಜನ್ಮಗಳನ್ನು ಕಳೆದ । ಶ್ರೀ ಶಿವಲಿಂಗನ ಪೂಜಿಸಿ ಬ್ರಹ್ಮನು ಅನಂತ ಕಲ್ಪಗಳನ್ನು ದಾಟಿದನು । ಶಿವನ ಪೂಜೆ ನಾಮಸ್ಮರಣೆಯಿಂದ ಅನೇಕ ಮುನಿಗಳು ಮೋಕ್ಷವನ್ನು ಪಡೆದರು । ಅವಲ್ಲವೂ ಶಿವನಾಮ ಸ್ಮರಣೆ | ಶಿವಪೂಜೆ ಬಂದಿಲ್ಲದೇ ಬೇರಿಲ್ಲ ನೋಡಾ || ಭದ್ರಕಾಳಿಯ ರಮಣ | ಕರವೀರಭದ್ರಾ ಕಡೆ ಕಡೆ.... </String>

< String name = " Sri veerabhadra vadapugalu 29" >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಶ್ರೀಗುರುವಿಗಿಂತಲೂ ಅಧಿಕರು ಅವಲೋಕದಲ್ಲಿಯೂ ಇಲ್ಲವಯ್ಯಾ | ಶ್ರೀಗುರುವಿಗಿಂತ ಪರೋಪಕಾರಿಗಳು ಮತ್ತ್ಯಾರು ಕಾಣೆನಯ್ಯಾ | ಅದೆಂತೆಂದಡೆ | ಎನ್ನ ಕಂಗಳ ಭಕ್ತ ಮಾಡಿದನಯ್ಯಾ | ಶ್ರೀಗುರುವು ಪರಮ ಶಿವಲಿಂಗಕ್ಕೆ ಎನ್ನ ಕಿವಿಗಳ ಭಕ್ತರ ಮಾಡಿದನಯ್ಯಾ | ಶ್ರೀಗುರು ಪರಮ ಶಿವಲಿಂಗಕ್ಕೆ | ಎನ್ನ ನಾಸಿಕ ನಾಲಿಗೆಯ ಭಕ್ತರ ಮಾಡಿದನಯ್ಯಾ | ಶ್ರೀಗುರುವು ಪರಮ ಶಿವಲಿಂಗಕ್ಕೆ | ಎನ್ನ ತನು ಮನಂಗಳ ಭಕ್ತರ ಮಾಡಿದನಯ್ಯಾ | ಶ್ರೀಗುರು ಪರಮ ಶಿವಲಿಂಗಕ್ಕೆ | ಇಂತಿವು ಮೊದಲಾಗಿ ಎನ್ನ ಸರ್ವ ಅವಯವಗಳನ್ನೆಲ್ಲಾ | ಲಿಂಗಾರ್ಪಿತಕ್ಕೆ ಅನುಗೊಳಿಸಿದ ಪರಮ ಶ್ರೀ ಗುರುವಿಗೆ ನಮೋ ನಮೋ ಎಂಬೆನಯ್ಯಾ | ಭದ್ರಕಾಳಿಯ ರಮಣ | ಚೆನ್ನಿಗ ಚನ್ನ ವೀರಭದ್ರ | ಅಭಿನವ ರುದ್ರ | ನಿನ್ನ ಪವಾಡಗಳು ಅಂದಿಗುಂಟು ಇಂದಿಗಿಲ್ಲವೆಂದು ಹೇಳುವ | ಗೆರೆವಾದಿಗಳಿಗೆ ನೀನೇ ಗಂಡ ಕಡೆ ಕಡೆ...... </String>

< String name = " Sri veerabhadra vadapugalu 30 " >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ । ಆಹಾ ವೀರಾ । ಹರಿವ ಹಾವಿನ ಗಂಡ । ಉರಿವ ಕಿಚ್ಚಿನ ಕೆಂಡ । ದುರುಳ ದುಷ್ಟ ಪಾಪಿಗಳ ಗಂಡ । ಕದನ ಪ್ರಚಂಡ । ಭದ್ರಕಾಳಿಯ ಗಂಡ । ಮೂರು ಲೋಕದ ಗಂಡ । ಶ್ರೀ ವೀರಭದ್ರ ಬಹುಪರಾಕ್ ಬಹುಪರಾಕ್....... </String>

< String name = " Sri veerabhadra vadapugalu 31" >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ರುದ್ರಾ | ಮಿತ್ಯು ಕುತ್ತಿನ ಗಂಡಾ | ಕರೆ ಕೊಡಿಯಲ್ಲಿರುವ ಕಿರುಕುಳ ದೇವರ ಗಂಡಾ | ಕೊಲ್ಲಾಪುರದ ಮಾಯಿಯ ಗಂಡಾ | ಮೂಡಲು ನಾಡಿನ ಮೂಕ ಚವಡಿಯ ಗಂಡಾ | ದ್ರೋಹಿ ನಿಂದಕರ ಗಂಡಾ | ನಾಸ್ತಿಕಪಾಪಿ ಚಾಂಡಾಲರ ಮಿಂಡ ನಮ್ಮ ಶ್ರೀ ವೀರಭದ್ರಾ ಬಹುಪರಾಕ್ ಬಹುಪರಾಕ್... </String>

< String name = " Sri veerabhadra vadapugalu 32" >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ಚಂಡಿಯಂ ಕಟ್ಟುವೆ | ಚಾಮುಂಡಿಯಂ ಕಟ್ಟುವೆ | ದುರ್ಗಾ ದೇವತೆಯಂ ಕಟ್ಟುವೆ | ಕಿನ್ನರರ ಕಟ್ಟುವೆ | ಕಿಂಪುರುಷರ ಕಟ್ಟುವೆ | ಕುಬೇರರ ಕಟ್ಟುವೆ ಇಂತೀ ಎಂಬತ್ನಾಲ್ಕು ಕೋಟಿ ರಾಕ್ಷಸರ ಕಟ್ಟುವೆ | ಗುಗ್ಗುಳ ಕೊಡುವುದು ಸುಗಮವಾಗಿ ಸಾಗಲೆಂದು ಶ್ರೀ ರುದ್ರನಂ ಕಟ್ಟುವೆ | ಕಡೆ ಕಡೆ .... </String>

< String name = " Sri veerabhadra vadapugalu 32" >ಶ್ರೀವೀರಭದ್ರೇಶ್ವರ ವಡಪು\n\n

ಆಹಾ ರುದ್ರಾ | ಆಹಾ ವೀರಾ | ನಿನ್ನನು ನಾನೇನು ಬೇಡಲಿ ದೇವಾ ಕೊಡಲೆನಗೆ ನಿನ್ನೊಳು ಏನುಂಟು | ಅದೆಲ್ಲವನ್ನೂ ತಿಳಿದು ತಿಳಿದು ನಿನ್ನನು ನಾನೇನು ಬೇಡಲಿ ದೇವಾ | ಆಹಾ ದೇವಾ | ನಿನ್ನ ಆಸನವನ್ನು ಬೇಡುವೆನೇ ಕಾಲಕೂಟವೂ ಓ ದೇವಾ | ನಿನ್ನ ವಸತಿಯನ್ನು ಬೇಡುವೆನೇ ಪಿತೃವನಾ ಭೂಮಿ |ನಿನ್ನ ಪರಿಚಾರಕರನ್ನು ಬೇಡುವೆನೇ ಭೂತಗಳು | ನಿನ್ನನು ನಾನೇನು ಬೇಡಲಿ ದೇವಾ ಕೊಡಲೆನಗೆ ನಿನ್ನೊಳು ಏನುಂಟು | ನಿನ್ನ ಹೊದುವ ಒದಿಕೆಯನ್ನು ಬೇಡವೆನೇ ಸೆಟದಾನೆಯ

ತೊಗಲು | ನಿನ್ನ ಉಡುವ ಪೀತಾಂಬರವನ್ನು ಬೇಡುವೆನೇ ಹುಲಿಯ ಚರ್ಮ | ನಿನ್ನ ಹೊಸ ಆಭರಣವನ್ನು ಬಿಡುವೆನೇ ಹಾವುಗಳು | ನಿನ್ನನು ನಾನೇನು ಬೇಡಲಿ ದೇವಾ ಕೊಡಲೆನಗೆ ನಿನ್ನೊಳು ಏನುಂಟು | ನಿನ್ನ ಭಸಿತ ಗಂಧವನ್ನು ಬೇಡುವೆನು ಹಣದ ಬೂದಿ | ನಿನ್ನ ಕರದ ಪಾತ್ರೆಯನ್ನು ಬೇಡುವೆನೇ ತಲೆಡೋಬಿ| ತುರಗವನು ಬೇಡುವೆನೇ ಬಹುದಿನದ ಮುದಿಯೆತ್ತು | ನಿನ್ನನು ನಾನೇನು ಬೇಡಲಿ ದೇವಾ ಕೊಡಲೆನಗೆ ನಿನ್ನೊಳು ಏನುಂಟು | ನಿನ್ನದೊಂದನು ಬೇಡನು ದೇವಾ | ಕೇವಲ ನಿನ್ನ ಭಕ್ತಿ, ಧ್ಯಾನ, ವೈರಾಗ್ಯವನು ಕೊಟ್ಟು ಸಲಹಯ್ಯ ಅಖಂಡೇಶ್ವರಾ....... </String>

< String name = “ Sri veerabhadra mangalaruthi 1“ > ಜಯ ವೀರಭದ್ರ ಕರುಣಾ ಸಮುದ್ರಾ\n\n

ಜಯ ವೀರಭದ್ರ ಕರುಣಾ ಸಮುದ್ರಾ

ಜಯಜಯತು ಮಂಗಲವು ಪರಶಿವನ ಪುತ್ರ ॥ ಪ ॥

ವರ ವೀರಶೈವ ಧರ್ಮದ ಮೂಲ ಪ್ರಭುವೇ

ಪರಶಿವನ ಕೋಪಾಗ್ನಿಯಿಂದ ಉದಿಸಿರುವೆ

ದುರುಳ ದಕ್ಷನ ಶಿರವ ಚಂಡಾಡಿರುವೆ

ಭರದಿ ನಿನ್ನಯ ಭಕ್ತರನ್ನು ಪಾಲಿಸಿರುವೆ ॥ ೧ ॥

ಕಿಡಿಗಣ್ಣ ಫಣೆಯೊಳಗೆ ಧರಿಸಿ ನೀ ಮೆರೆದೆ

ವಡಬಾಗ್ನಿಯಂತೆ ವೈರಿಗಳ ಸದೆಬಡಿದೆ

ಕಡುಕೋಪದಿಂದ ಮೂಜಗವ ನಡುಗಿಸಿದೆ

ಒಡೆಯ ಶಿವನನ್ನು ಭಜಿಪ ಭಕ್ತರನ್ನು ಪೊರದೆ ॥ ೧ ॥

ಶರಣು ಜನರಕ್ಷಕನೆ ಮರೆಹೊಕ್ಕೆ ನಾನು

ನಿರುತ ನಿನ್ನನು ನಂಬಿದವರ ಪೊರೆ ನೀನು

ಗುರಿಕಾಣೆ ಕರುಣಿಸೈ ಸುಜ್ಞಾನ ಭಾನು

ಗುರುವೇ ಶ್ರೀ ವೀರೇಶ ಗುರಿತೋರು ನೀನು ॥ ೨ ॥

ರಚನೆ: ಸಿ.ಎಂ. ವೀರಣ್ಣನವರು, ವಿಜಯಪುರ. </string>

< String name = “ Sri veerabhadra mangalaruthi 2“ > ಮಂಗಳಾರತಿ ಶುಭ ಮಂಗಳಾರತಿ\n\n

ಮಂಗಳಾರತಿ ಶುಭ ಮಂಗಳಾರತಿ

ಶ್ರೀ ವೀರಭದ್ರನಿಗೆ ಮುತ್ತಿನಾರುತಿ ॥ ಪ ॥

ಶಂಕರನ ಸಿರಿಸುತಗೆ ಮಂಗಳಾರತಿ

ಭದ್ರಕಾಳಿ ರಮಣಗೆ ಮುತ್ತಿನಾರುತಿ ॥ ಅನು ॥

ಕೆಂಜೆಡೆಯ ಉರಿಗಣ್ಣಗೆ ರತ್ನದಾರುತಿ

ದುರುಳ ದಕ್ಷ ಹರಗೆ ತುಪ್ಪದಾರುತಿ

ಶ್ರೀ ಶರಭ ದೇವನಿಗೆ ಹೂವಿನಾರುತಿ

ವೀರಾಧಿ ವೀರನಿಗೆ ಭಕ್ತಿ ಆರುತಿ ॥ ೧ ॥

ಗುಗ್ಗುಳ ಪೂಜಿತಗೆ ಪುಷ್ಪದಾರುತಿ

ಖಡ್ಗ ಬಿಲ್ಲು ಭೂಷಿತಗೆ ಭಾವದಾರುತಿ

ಕರುಣಾಳು ಶಿವಕಂಡಗೆ ಕಂಗಳಾರುತಿ

ಪ್ರಳಯ ಸ್ವರೂಪನಿಗೆ ಹೊನ್ನಿನಾರುತಿ

ಚೌಡೇಶ್ವರಿ ಸೋದರಗೆ ಮಂಗಳಾರತಿ ॥ ೧ ॥ </string>

< String name = " Sri veerabhadra mangalaruthi 3" > ವೀರ ಮಂಗಳಂ ವೀರಭದ್ರ ಮಂಗಳಂ\n\n

ವೀರ ಮಂಗಲಂ ವೀರಭದ್ರ ಮಂಗಳಂ

ಭದ್ರಕಾಳಿ ಪ್ರಿಯಪತಿ ವಿರೂಪಾಕ್ಷ ಮಂಗಳಂ

ದಕ್ಷ ಯಜ್ಞವ ನಾಶ ಮಾಡಿದಾತ ನೀ

ರುಂಡಮಾಲೆ ಖಡ್ಗ ಶಸ್ತ್ರಧಾರಿ ಮಂಗಳಂ

ಉಗ್ರರೂಪಿ ನೀ ದೇವ ಉತ್ತಮಾಂಗ ನೀ

ದುಷ್ಟಶಕ್ತಿ ನಿಗ್ರಹ ಪ್ರತಾಪಿ ಮಂಗಳಂ

ಭಕ್ತ ವತ್ಸಲ ಭವ ಭಯಾಪಹಾರಣ

ಲಿಂಗರೂಪಿ ಭಸಿತ ಭೂಷ ಸತತ ಮಂಗಳಂ

ಶಿವನ ರೂಪನೇ ಶಿವಭಕ್ತ ಪ್ರೀಯನೇ

ಶಾಂತಿದಾತ ಕ್ರಾಂತಿರೂಪ ಮಹಾಂತ ಮಂಗಳಂ

ಕ್ಷೇತ್ರ ನಾಯಕ ಯಡೂರು ವಾಸತಾ

ವಿರಚಿತ ಶ್ರೀಶೈಲನಾರಾssಧ್ಯ ದೈವತಾ </string>

< String name = " Sri veerabhadra mangalaruthi 4" > ಜಯ ಮಂಗಳಂ ನಿತ್ಯ ಶುಭ ಮಂಗಳಂ\n\n

ಜಯ ಮಂಗಳಂ ನಿತ್ಯ ಶುಭ ಮಂಗಳಂ ।

ಜಯ ಜಯತು ಶ್ರೀ ವಿಜಯ ವೀರೇಶಗೆ ॥ ಪ ॥

ಮಂಗಳಂ ಕಿಡಿಗಣ್ಣ ರುದ್ರಾವತಾರನಿಗೆ

ಮಂಗಳಂ ಭದ್ರಕಾಳೀಶ್ವರನಿಗೆ

ಮಂಗಳಂ ಮಂಗಳಂ ದಕ್ಷ ಸಂಹಾರನಿಗೆ

ಮಂಗಳಂ ಶ್ರೀ ವೀರಭದ್ರೇಶಗೆ

ಜಯಮಂಗಳಂ ನಿತ್ಯ ಶುಭ ಮಂಗಳಂ ॥ ೧॥

ಶರಭಾವತಾರನಿಗೆ ಶರ್ವಾಣಿಯಾತ್ಮಜತೆ

ಶರಣ ಜನಪ್ರೀತನಿಗೆ ಶಕ್ತಿಯುತಗೆ

ಶರಧಿ ಗಂಭೀರನಿಗೆ ಶಂಕರಾಪ್ರಾಣನಿಗೆ

ಶರಣಾಗತತ್ರಾಣ ಬಿರುದಾಂಕಗೆ

ಜಯಮಂಗಳಂ ನಿತ್ಯ ಶುಭ ಮಂಗಳಂ ॥ ೧ ॥

ಶ್ರೀ ಸ್ವರ್ಣರಜತಗಿರಿ ರಾಜನ ಕುಮಾರನಿಗೆ

ಭಾವಜನ ಚಲುವಿನಲಿ ಸೋಲುವನಿಗೆ

ತಾವರೆಯ ಸಖನ ಶತಕೋಟಿ ಪ್ರಕಾಶನಿಗೆ

ದೇವರಿಗೆ ದೇವರೆಂದೆನಿಸುವನಿಗೆ

ಜಯಮಂಗಳಂ ನಿತ್ಯ ಶುಭ ಮಂಗಳಂ ॥ ೩ ॥

ಸುಜನ ರಕ್ಷಕನಿಗೆ ಸುಜ್ಞಾನ ಮಯನಿಗೆ

ಕುಜನ ಗುಣ ಸಂಹರಗೆ ಕುಶಲ ಮತಿಗೆ

ಗಜ ಮುಖನ ಅನುಜನಿಗೆ ಘನ ಕೃಪಾಸಾಗರಗೆ

ವಿಜಯಕರ ಕೀರ್ತಿ ವಿಖ್ಯಾತಯುತಗೆ

ಜಯಮಂಗಳಂ ನಿತ್ಯ ಶುಭ ಮಂಗಳಂ ॥ ೪ ॥

ಪರಶಿವನ ಫಾಲಲೋಚನದೊಳುದ್ಭವಿಸಿದವಗೆ

ಮಿರುಗುವ ಲಲಾಟಾಕ್ಷ ಉಳ್ಳವನಿಗೆ

ಕರಗಳಲಿ ಖಡ್ಗಧನುಶರಗಳನ್ನು ಧರಿಸಿದ

ವರಸಮಯವಾರ್ಧಿ ವಡಬಾನಲಂಗೆ

ಜಯಮಂಗಳಂ ನಿತ್ಯ ಶುಭ ಮಂಗಳಂ ॥ ೫ ॥ </string>

< String name = “ Sri veerabhadra mangalaruthi 5“ > ರುದ್ರಗೆ ಕಲಿ ವೀರಭದ್ರಾಗೆ\n\n

ರುದ್ರಗೆ ಕಲಿ ವೀರಭದ್ರಾಗೆ ……

ಎತ್ತಾರುತಿಯ ಬೆಳಗಿರಿ ಸಾ ರುದ್ರದೇವಾಗೆ

ಎತ್ತುಹಾರುತಿ ಬೆಳಗಿರಿ ಯುವ ಯುದ್ಧದಲ್ಲಿ ಭದ್ರನಾಗಿ

ಯುದ್ಧದೈತ್ಯರನೆಲ್ಲ ಕೊಂದು ಗುದ್ದಿ ಗುದ್ದಿ ಕೆಡಸಿದಾ..

ವೀರನೊ ಮಹಾಶೂರನೋ ಇವನು

ಮಹಾದೇವ ಮಗನು ಸಿಟ್ಟಿಲಿ ಬೆವರಿಲಿ ಹುಟ್ಟಿದನು

ಹುಟ್ಟಿದಾಕ್ಷಣ ತಟ್ಟನೆದ್ದು ತೊಟ್ಟ ಕಾಶಿ ತಿರುವಿ ಮೀಸೆ

ದಕ್ಷಾಡಳಿತವ ನೋಡಲಾರದೆ ದಕ್ಷಬ್ರಹ್ಮನ ಬಳಿಗೆ ಹೋದಾ...

ಕಡಿಕಡಿ ಕಿಡಿಕಿಡಿಯನು ಕಡಿದಾ…

ಕಡಿಕಡಿಯ ಎನುತಲಿ ದಕ್ಷಬ್ರಹ್ಮನು ಎಲ್ಲಿ ಇರಲೆಂದಾ

ಕಡಿದ ಶಿರವನು ಮಡಿದ ಪ್ರಾಣವ

ಧರಣಿ ಮೇಲಿನ ಯಣಗಳೆಲ್ಲ ಕರುಣದಿಂದಲಿ ಗುಣಸಿದಾ....

ಎತ್ತಿರಿ ಮುತ್ತಿನ ಹಾರುತಿಯ

ಮುತ್ತೈದೆಯಲ್ಲರು ಬೆಳಗಿರಿ ಉಗ್ರ ಮೂರುತಿಗೆ

ಉಗ್ರ ಮೂರುತಿ ವಿಘ್ನವೆಲ್ಲವ ದೂರಮಾಡಿದೆ

ಅಗ್ರಜ ಇವ ಭೋಮಗೆ.......

ನಂಬಿದಾ ಭಕ್ತರನು ಸಲಹುವ.....

ಬಂದಾನ ಬಂದನು ಶಸ್ತ್ರತಗೊಂಡು ಬೆನ್ನು ಹಿಂದಿಡುವ

ಈಶನೇ ಪರಮೇಶನೇ ರುದ್ರೇಶನೇ ಯಾತ್ರೇಶನೇ

ದೇಶದೋಳು ಹಲಗೇರಿ ಬಸವನ ಕೂಸುಮಾಡಿದ ಪಾಸಕೆ... </string>

< String name = " Sri veerabhadra mangalaruthi 6" > ಮಂಗಳಾರತಿ ಎತ್ತಿಪಾಡುವೆ\n\n

ಮಂಗಳಾರತಿ ಎತ್ತಿಪಾಡುವೆ

ಭಂಗವಿಲ್ಲದೆ ಶಿನಸುತಗೆ

ರುದ್ರನಣುಗಗೆ ವೀರಪುರುಷಗೆ

ಭದ್ರಮೂರ್ತಿಗೆ ವೀರಭದ್ರಗೆ || ಪ ||

ಕ್ಷುದ್ರ ಕರ್ಮವ ಛಿದ್ರಗೈವಗೆ

ಭದ್ರಕಾಳಿಯ ಶ್ರೇಷ್ಠವರನಿಗೆ

ದುಷ್ಟಸುರರನು ಕುಟ್ಟ ನಲಿದಗೆ

ಸೃಷ್ಟಿಕರ್ತನ ಕಟ್ಟಿದವನಿಗೆ || ೧ ||

ಹುರಿಣರೂಪದ ಧರಿಸುತೋಡುವ

ಹರಿಯ ಹರಣವ ತೆಗೆದ ವೀರಗೆ

ದುರಳ ದಕ್ಷನ ಶಿರವತರಿದಗೆ

ಕುರಿಯದಲೆಯನು ಕೊಟ್ಟ ಮಹಿಮಗೆ ॥ ೧ ॥

ಭಗನನೇತ್ರವ ತೆಗೆದ ಶೂರಗೆ

ಸೋಗದೆ ರುದ್ರನ ತಣಿಸಿದವನಿಗೆ

ಅಜನ ರಾಣಿಯ ಮೂಗತೆಗೆಯುತೆ

ನಿಜವನವಳಿಗೆ ತಿಳಿಸಿದವನಿಗೆ ॥ ೩ ॥

ದಿಧಿಪರುಗಳ ಸೊಕ್ಕನಳಿಯುತೆ

ನಗುತ ಚಂದ್ರನ ತಿಕ್ಕಿದವನಿಗೆ

ಚೊಕ್ಕಮತಿಯನು ಕೊಡುವ

ದೇವಗೆ ಸೊಕ್ಕೆಯ ಕವಿ ಹೃದಯವಾಸಗೆ ॥ ೪ ॥

ರಚನೆ : ಸೊಕ್ಕೆ ಶ್ರೀ ಸಿದ್ಧವೀರ ಕವಿಗಳು </string>

< String name = " Sri veerabhadra mangalaruthi 7" > ರಾಯಚೋಟಿ ಶ್ರೀ ವೀರಭದ್ರೇಶ್ವರಗೆ\n\n

ರಾಯಚೋಟಿ ಶ್ರೀ ವೀರಭದ್ರೇಶಗೆ

ಕರ್ಪೂರದಾರುತಿ ಎತ್ತಿ ಕರುಣಾಸಾಗರಗೆ ॥ ಪ ॥

ಶಿವಫಣಿ ಬೆವರಿಗೆ ಜನಿಸಿದ ರುದ್ರನಿಗೆ
ಕೆಂಜೆಡೆಯ ಕಿಡಿಗಣ್ಣ ಉಗ್ರ ಮೂರುತಿಗೆ
ದಕ್ಷ ಬ್ರಹ್ಮನ ಶಿರವ ಚಂಡಾಡಿದವಗೆ
ರುಂಡ ಮಾಲೆಯನ್ನು ಕೊರಳಲ್ಲಿ ಧರಿಸಿಪಗೆ ॥ ೧ ॥

ವೀರಾವತರವ ತೋರುವ ಧೀರನಿಗೆ
ಭದ್ರಕಾಳಿಯ ಪ್ರಿಯ ಕರವೀರಭದ್ರನಿಗೆ
ಮಂಗಳಾರುತಿ ಎತ್ತಿ ಮಹಾಮಹಿಮಗೆ
ರತ್ನದಾರುತಿ ಬೆಳಗಿ ರಾಚೋಟಿ ವೀರನಿಗೆ ॥ ೨ ॥

ಚೆನ್ನದಾರುತಿ ಎತ್ತಿ ಚಿನ್ಮಯ ರೂಪನಿಗೆ
ಮುತ್ತಿನಾರುತಿ ಎತ್ತಿ ಮುಕ್ಕಣ್ಣ ಸುತನಿಗೆ
ನಂಬಿದಾ ಭಕ್ತರಿಗೆ ವರವ ನೀಡುವಗೆ
ಶೃಂಗಾರದಿಂದಲಿ ಶ್ರೀ ವೀರಭದ್ರನಿಗೆ ॥ ೩ ॥ </string>

< String name = " Sri veerabhadra mangalaruthi 8" > ಕರ್ಪೂರಾರುತಿ ಬೆಳಗಿರಿ\n\n

ಕರ್ಪುರಾರತಿ ಬೆಳಗಿರಿ

ಕರಿವೀರಗೆ ಗಂಭೀರಗೆ ‖ ಪ ‖

ನೀಲಕಂದರ ನಿಗಮಗೋಚರ

ಬಾಲಚಂದ್ರಾಭರಣಗೆ

ಪ್ರಳಯಕಾಲದ ಅಗ್ನಿಗಣ್ಣಲಿ

ಜನಿಸಿದಾ ಶ್ರೀ ವೀರಭದ್ರಗೆ ‖ ೧ ‖

ವಾರಿಜೋದ್ಭವ ಶಿರವ ಹರಿದನು

ಮಾರಹರ ಮಹಾವೀರಗೆ,

ಘೋರಪಾಪವ ದೂರ ಮಾಡುವ

ಶೂರ ವೀರಭದ್ರಗೆ ‖ ೨ ‖

ಶರಣಜನಕೆ ವರವನಿತ್ತ

ಪರಮ ಪಾರ್ವತಿ ಪುತ್ರಗೆ

ಧರೆಯೊಳಧಿಕ ಮೊರಬದಾ

ಶ್ರೀ ವೀರಭದ್ರ ದೇವಗೆ ‖ ೩ ‖

ರಚನೆ: ಚೌಡಾಪುರ ಮಠದ ಬಸಯ್ಯಸ್ವಾಮಿಯವರು </string>

< String name “ Sri veerabhadra mangalaarati 8 “> ಜಯವೆಂದು ಬೆಳಗುವೆ ವೀರಭದ್ರನಿಗೆ\n\n

ಜಯವೆಂದು ಬೆಳಗುವೆ ವೀರಭದ್ರನಿಗೆ

ವೀರಭದ್ರನಿಗೆ ಭದ್ರನಾಥನಿಗೆ || ಪ ||

ಪರಶಿವನ ಸ್ವೇದದಿ ಉದ್ಭವಿಸಿದವನಿಗೆ

ಪರಮೇಶ್ವರನ ಆಜ್ಞೆಯನ್ನು ಪಾಲಿಸದವನಿಗೆ || ೧ ||

ಗರ್ವಿ ದಕ್ಷನ ತಲೆ ಕತ್ತರಿಸಿದವನಿಗೆ

ಗದ್ಗದಿತ ಸತಿದೇವಿಯ ಕರುಣಿಸಿದವನಿಗೆ || ೨ ||

ಹನುಮಂತನ ಪ್ರಾರ್ಥನೆ ಮನ್ನಿಸಿದವನಿಗೆ

ವರಲಿಂಗ ದೀಕ್ಷೆಯನ್ನಿತ್ತು ದಯಪಾಲಿಸಿದವನಿಗೆ || ೩ ||

ಚಂಡಶಾಸನನಾಗಿ ಮಂಡಿಸಿದವನಿಗೆ

ಉಂಡಬಂಡ ವೀರಭದ್ರನಾಥನಿಗೆ || ೪ || </string>

< String name = " Sri veerabhadra mangalaarati 9 " >ಶ್ರೀವೀರಭದ್ರ ಮಂಗಳಂ ದೇವಭದ್ರ ಮಂಗಳಂ\n\n

ವೀರಭದ್ರ ಮಂಗಳಂ ದೇವಭದ್ರ ಮಂಗಳಂ

ಹಿತಪವಿತ್ರ ಗತಚರಿತ್ರ ಪತೀತನಾಥ ಮಂಗಳಂ ॥ಪ॥

ದಕ್ಷಾರಿಗೆ ಮಂಗಳಂ ಶಿಕ್ಷಾತ್ಮಗೆ ಮಂಗಳಂ

ತಿಸಿವೆನಿಸಿ ತಪಗೈದ ರಕ್ಷಕನಿಗೆ ಮಂಗಳಂ

ರಕ್ಷಕನಿಗೆ ಮಂಗಳಂ ॥೧॥

ವಿಶ್ವಾತ್ಮಗೆ ಮಂಗಳಂ ವೀರವರಗೆ ಮಂಗಳಂ

ವಿಶ್ವಪೂರ್ಣ ಚಿಜ್ಜ್ಯೋತಿಗೆ ಶಿವಪುತ್ರಗೆ ಮಂಗಳಂ

ಶಿವಪುತ್ರಗೆ ಮಂಗಳಂ ॥೨॥

ಕಾಲಹರಗೆ ಮಂಗಳಂ ನೀಲಾತ್ಮಗೆ ಮಂಗಳಂ

ಪಾಲಾಕ್ಷಗೆ ಮಂಗಳಂ ವೀರೇಶಗೆ ಮಂಗಳಂ

ವೀರೇಶಗೆ ಮಂಗಳಂ ॥೩॥

ಶ್ರೀಶರಭಗೆ ಮಂಗಳಂ ಕಲಿವೀರಗೆ ಮಂಗಳಂ

ಮಾರುತಿಗೆ ಲಿಂಗ ಕೊಟ್ಟ ಭದ್ರೇಶಗೆ ಮಂಗಳಂ

ಭದ್ರೇಶಗೆ ಮಂಗಳಂ ॥೪॥ </string>

< String name = “ Sri veerabhadra mangalaarati 10 “ >ಜಯ ಮಂಗಳಂ ಜಯ ಮಂಗಳಂ\n\n

ಜಯ ಮಂಗಳಂ ಜಯ ಮಂಗಳಂ

ಜಯ ಜಯ ಶುಭ ಮಂಗಳಂ ।

ಭದ್ರಕಾಳಿಕಾ ಪ್ರಾಣ ನಾಯಕಾ

ರಾಚೋಟಿ ವಾಸಾಯ ಮಂಗಳಂ ॥

ನಿತ್ಯ ನಿರಂಜನ ನಿಗಮಗೋಚರಾ

ಸಚ್ಚಿದಾನಂದ ಮಂಗಳಂ ।

ಪರಮ ದಯಾಳೋ ಪಾವನ ಚರಿತ

ಪಾರ್ವತಿ ಪುತ್ರಾ ಮಂಗಳಂ ॥

ದಕ್ಷೋದ್ಧಾರ ದಯಾಸಾಗರ

ದಾನವ ಮರ್ಧನ ಮಂಗಳಂ ॥

ಭಸ್ಮಭೂಷಿತ ಭವ ಭಯ ಭಂಜನ

ಭಕ್ತವತ್ಸಾಲಾ ಮಂಗಳಂ ।

ನಂದಿವಾಹನಾ ಪನ್ನಗ ಭೂಷಣ

ತ್ರಿಶೂಲಧಾರಿ ಮಂಗಳಂ ॥

ಶಂಭೋ ಶಂಕರ ಸಾಂಬಸದಾಶಿವ

ಶಂಭುಸುಪುತ್ರಾ ಮಂಗಳಂ ॥

ಸುಂದರ ವಿಗ್ರಹ ಚೆನ್ನಿಗವೀರ

ಜಗನ್ಮೋಹನಾ ಮಂಗಳಂ ।

ಆನಂದ ರೂಪಾ ಅಭಿಷೇಕ ಪ್ರಿಯ

ಅಗಣಿತ ಮಹಿಮಾ ಮಂಗಳಂ ॥

ಜ್ಞಾನ ಖಡ್ಗಧರ ಜಗದ್ಗುರುವರ

ಶ್ರೀ ವೀರೇಶ್ವರ ಮಂಗಳಂ ॥

ರಚನೆ : ಮಠಪತಿ ಶಂಕ್ರಯ್ಯಸ್ವಾಮಿಗಳು,ರಾಚೋಟಿ ದೇವಸ್ಥಾನ ಮುಖ್ಯ ಅರ್ಚಕರು. </String>

< String name = " Sri veerabhadra puswanjali" > ಶ್ರೀ ವೀರಭದ್ರ ಪುಷ್ಪಾಂಜಲಿ**\n\n**

ಹರಃ ಓಂ ಯಜ್ಞ ೀನ ಯಜ್ಞಮಯ ಜಂತುದೇವಾ ।

ಸ್ಥಾನಿ ಧರ್ಮಾಣಿ ಪ್ರಥಮಾನ್ಯ ಸದ್ಯಾನ್ನ ।

ತೇಹನಾಕಂ ಮಹಿಮಾನ ಸಚಂತ್ರ ಯತ್ರ

ಪೂರ್ವ ೀ ಸಾಧ್ಯಃ ಸಂತು ದೇವಾ ||

ವಿರುಪಾಕ್ಷಯಾ ವಿದ್ಮಹೇ । ವೀರೇಶಾಯ ಧೀಮಯೇ ।

ತನ್ನೋ ವೀರಭದ್ರ ಪ್ರಚೋದಯಾತ್ ।

ಓಂ ಶಾಂತಿ ಶಾಂತಿ ಶಾಂತಿಃ ||

|| ಭದ್ರಂ ಶುಭಂ ಮಂಗಲಂ || </string>